ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಎಪ್ರಿಲ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-18 ಸಂಚಿಕೆ-4 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20


## ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾಮಹೋತ್ಸವ






ತಾ.14-03-2018ರ ಬುಧವಾರ ಮೀನಸಂಕ್ರಮಣದಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾದೇವಸ್ಥಾನದಲ್ಲಿ ಪ್ರತಿಷ್ಠಾಮಹೋತ್ಸವ ನಡೆಯಿತು. ಇದು ಶ್ರೀ ಶಾರದೆಯು ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯಹಸ್ತಗಳಿಂದ ಪ್ರತಿಷ್ಠಾಪಿಸಲ್ಪಟ್ಟ ದಿನ. ಅಂದು ಬೆಳಿಗ್ಗೆ ಎಂಟು ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರವರ ನೇತೃತ್ವದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾವ್, ಕಾರ್ಯದರ್ಶಿ ಶ್ರೀ ಕೆ. ಸುರೇಶ ರಾವ್, ಕೋಶಾಧಿಕಾರಿ ಶ್ರೀ ಸುಧಾಕರ ರಾವ್, ಉಪಾಧ್ಯಕ್ಷರಾದ ಶ್ರೀ ಎಸ್. ಎಂ ರಾವ್, ಮಹಿಳಾವೇದಿಕೆಯ ಶ್ರೀಮತಿ ಉಷಾ ಶ್ಯಾನುಭಾಗ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್, ಶ್ರೀಮತಿ ಉಷಾ ಮೋಹನದೇವ ಇತ್ಯಾದಿ ಸಮಾಜಬಾಂಧವರು ಶ್ರೀ ದೇವಿಯ ಸಮ್ಮುಖದಲ್ಲಿ ಪ್ರಾರ್ಥಿಸಿ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ನಂತರ ಸ್ವಾಧ್ಯಾಯ ಸಮಿತಿಯವರಿಂದ ಸಪ್ತಶತಿ, ರುದ್ರ ಹಾಗೂ ಪುರುಷಸೂಕ್ತ ಪಾರಾಯಣ, ಮಹಿಳಾ ವೇದಿಕೆಯವರಿಂದ ಶ್ರೀ ಸೂಕ್ತ, ದೇವಿ ಸೂಕ್ತ, ಲಲಿತಾ ಸಹಸ್ರನಾಮ, ಸೌಂದರ್ಯಲಹರಿ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣ ಹಾಗೂ ಭಜನಾ ಕಾರ್ಯಕ್ರಮ ನೆರವೇರಿತು. ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರು ಬ್ರಹ್ಮಶ್ರೀ ರವಿ ಉಪಾಧ್ಯಾಯ, ಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯ ಹಾಗೂ ಬ್ರಹ್ಮಶ್ರೀ ಶಿವಪ್ರಸಾದ್ ಭಟ್‌ರವರೊಂದಿಗೆ ದೇವಿಗೆ ಪಂಚಾಮೃತಾಭಿಷೇಕ, ಗಣಹೋಮ ಇತ್ಯಾದಿಗಳನ್ನು ವಿಧಿವತ್ತಾಗಿ ನೆರವೇರಿಸಿ ಸಮರ್ಪಿಸಿದರು. ನೆರೆದ ನೂರಾರು ಭಕ್ತರ ಸಮ್ಮುಖದಲ್ಲಿ ಮಧ್ಯಾಹ್ನ ಹನ್ನೆರಡು ಗಂಟೆಗೆ ಮಂಗಳಾರತಿ ಮಹಾಪೂಜೆಯನ್ನು ನೆರವೇರಿಸಲಾಯಿತು. ಶ್ರೀಯುತ ಕೆ. ಸುರೇಶ್ ರಾವ್ ಮತ್ತು ಶ್ರೀಮತಿ ನಾಗವಲ್ಲಿ ದಂಪತಿಗಳು ಪೂಜಾಕರ್ತೃಗಳಾಗಿ ಧಾರ್ಮಿಕ ಕಾರ್ಯಕ್ರಮಗಳನ್ನು ಸಂಘದ ಪರವಾಗಿ ನೆಡೆಸಿದರು. ದೇವಿಯನ್ನು ಬೆಳ್ಳಿಯ ಸಿಂಹಾಸನ, ಪ್ರಭಾವಳಿ ಹಾಗೂ ಕಿರೀಟದೊಂದಿಗೆ ಚಿನ್ನ ಹಾಗೂ ವಜ್ರದ ಆಭರಣಗಳಿಂದ ಅಲಂಕರಿಸಲಾಗಿತ್ತು. ಕಾರ್ಯದರ್ಶಿಗಳಾದ ಶ್ರೀ ಕೊಕ್ರಾಡಿ ಸುರೇಶ ರಾವ್ ಹಾಗೂ ಶ್ರೀಮತಿ ನಾಗವಲ್ಲಿ ದಂಪತಿಗಳು ಬೆಳ್ಳಿಯ ಹಾರವನ್ನು ದೇವರಿಗೆ ಸಮರ್ಪಿಸಿದರು. ಮಹಾಪೂಜೆಯ ನಂತರ ಭೋಜನ ಪ್ರಸಾದವನ್ನು ಏರ್ಪಾಟು ಮಾಡಲಾಗಿತ್ತು. ಅದೇ ದಿನ ಶ್ರೀ ಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕೆಲಸವೂ ಕಾರ್ಯಕರ್ತರ ಸಹಕಾರದಿಂದ ನೆರವೇರಿತು.

## ಶ್ರೀ ಶಾರದಾ ದೇವಸ್ಥಾನದಲ್ಲಿ ಕಿರುನವರಾತ್ರಿ–ದುರ್ಗಾನಮಸ್ಕಾರ






ತಾ. 18-03-2018ನೇ ರವಿವಾರ ಕಿರುನವರಾತ್ರಿ ಪೂಜೆಗಳು ಶ್ರೀ ಶಾರದಾ ದೇವಸ್ಥಾನದಲ್ಲಿ ಆರಂಭವಾಯಿತು. ಅಂದು ಚಾಂದ್ರಮಾನ ಪದ್ಧತಿಯ ಪ್ರಕಾರ ಯುಗಾದಿ–ವಿಳಂಬಿನಾಮ ಸಂವತ್ಸರದ ಆರಂಭ. ಅಂದಿನಿಂದ ವಸಂತಕಾಲದ ಈ ಒಂಬತ್ತು ದಿನಗಳ ಪೂಜೆಯು ದೇವಿಗೆ ವಿಶೇಷ. ಕಿರುನವರಾತ್ರಿಯ ಕೊನೆಯ ದಿನವೇ ರಾಮನವಮಿ. ರಾಮನವಮಿಯಂದು ಸಾಮೂಹಿಕ ದುರ್ಗಾನಮಸ್ಕಾರವನ್ನು ನೆರವೇರಿಸುವ ಕಾರ್ಯಕ್ರಮವನ್ನು ನಮ್ಮ ಸಂಘದಲ್ಲಿ ಅನೇಕ ವರ್ಷಗಳಿಂದ ಪಾಲಿಸುತ್ತಿದ್ದೇವೆ. ಕಿರುನವರಾತ್ರಿಯ ಒಂಬತ್ತು ದಿನಗಳಲ್ಲಿಯೂ ಶ್ರೀ ಶಾರದಾ ದೇವಸ್ಥಾನದಲ್ಲಿ ಶಾರದೆಯನ್ನು ವಿಶೇಷವಾಗಿ ಅಲಂಕರಿಸಿ ದಿನನಿತ್ಯವೂ ಪಾರಾಯಣ ಭಜನೆಗಳೊಂದಿಗೆ ಪೂಜಿಸಲಾಗುತ್ತಿತ್ತು. ನೂರಾರು ಸಮಾಜಬಾಂಧವರು ಹಾಗೂ ಭಕ್ತರು ಈ ದಿನಗಳಲ್ಲಿ ವಿಶೇಷವಾಗಿ ಪೂಜೆಯನ್ನು ಪ್ರಾಯೋಜಿಸಿ ಕೃತಾರ್ಥರಾದರು. ಕಿರುನವರಾತ್ರಿಯ ಅಂಗವಾಗಿ ತಾ. 25.03.2018ರ ರವಿವಾರ ನವಮಿಯಂದು ಸಂಜೆ ಸಂಘದ ವತಿಯಿಂದ ಮಹಿಳಾವೇದಿಕೆಯ ವಿಶೇಷ ಮುತುವರ್ಜಿಯಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ನೆರವೇರಿತು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ಋತ್ವಿಜರಾಗಿ ಆಗಮಿಸಿದ್ದರು. ಅವರೊಂದಿಗೆ ಬ್ರಹ್ಮಶ್ರೀ ಪ್ರತಾಪ್ ಭಟ್‌ರವರು ಸಹಕರಿಸಿದರು. ಸ್ವಾಧ್ಯಾಯ ತಂಡದವರು ಪಾರಾಯಣವನ್ನು ಮಾಡಿದರು. ಮಹಿಳಾವೇದಿಕೆಯಿಂದ ಭಜನಾ ಕಾರ್ಯಕ್ರಮ ನೆರವೇರಿತು. ಶ್ರೀ ವೈ. ಭುವನೇಂದ್ರರಾವ್ ಹಾಗೂ ಶ್ರೀಮತಿ ಜಯಶ್ರೀ ದಂಪತಿಗಳು ಪೂಜಾಕರ್ತೃವಾಗಿ ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ರಾತ್ರಿ 7.30 ಗಂಟೆಗೆ ಮಹಾಪೂಜೆಯಾಯಿತು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು. ಇನ್ನೂರಕ್ಕೂ ಹೆಚ್ಚು ಸಮಾಜಬಾಂಧವರು ಪಾಲ್ಗೊಂಡಿದ್ದರು.

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಪ್ರಿಯರೇ,

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ತಾ.20-04-2018ನೇ ಶುಕ್ರವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ :

– ಆಡಳಿತ ಮಂಡಳಿ

**ಕಾರ್ಯಕ್ರಮಗಳ ವಿವರ :** ಬೆಳಿಗ್ಗೆ 8-00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಉಪನಯನ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

## ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

ಮತ್ತೆ ಚುನಾವಣೆ ಬಂದಿದೆ. ಚುನಾವಣೆ ಜನಬಲದ ಆಟ. ಜಾತಿಧರ್ಮಗಳ ಹೆಸರಿನಲ್ಲಿ ಓಟುಗಳನ್ನು ಧ್ರುವೀಕರಿಸಿಕೊಂಡು ಗೆದ್ದು ಅಧಿಕಾರ ಹಿಡಿಯುವ ಆಟವನ್ನು ರಾಜಕಾರಿಣಿಗಳು ಕರತಲಾಮಲಕ ಮಾಡಿಕೊಂಡಿರುವುದರಿಂದ ಹಾಗೂ ನಮ್ಮ(ಬ್ರಾಹ್ಮಣರ) ಜನಸಂಖ್ಯೆ ಕಡಿಮೆಯಿರುವುದರಿಂದ ನಮ್ಮ ಆಟ ಇಲ್ಲಿ ನಡೆಯುವುದಿಲ್ಲ ಎಂಬ ಭಾವನೆ ಬ್ರಾಹ್ಮಣರಲ್ಲಿ ಸಾರ್ವತ್ರಿಕವಾಗುತ್ತಿದೆ. ಹಾಗಾದರೆ ನಾವು ಈ ದೇಶದಲ್ಲಿ ಅಪ್ರಸ್ತುತರಾಗುತ್ತಿದ್ದೇವೆಯೇ? ಖಂಡಿತಾ ಇಲ್ಲ! ರಾಜಕೀಯದಲ್ಲಿ ಬ್ರಾಹ್ಮಣರ ಪ್ರಾತಿನಿಧ್ಯ ಕಡಿಮೆಯಾಗುತ್ತಿದ್ದರೂ ಅಪರೋಕ್ಷವಾಗಿ ಈ ದೇಶದ ಚುಕ್ಕಾಣಿ ನಮ್ಮ ಕೈಯಲ್ಲಿಯೇ ಇದೆ ಎಂದರೆ ಆಶ್ಚರ್ಯವಾಗುತ್ತದೆಯೆ?

ಸರಕಾರದಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಎಂಬ ಮೂರು ಅಂಗಗಳು. ಶಾಸಕಾಂಗ ಈ ದೇಶದ ಶಾಸನಗಳನ್ನು ರೂಪಿಸುವ ಸಂಸ್ಥೆ. ನಿಜಾರ್ಥದಲ್ಲಿ ಈ ಅಂಗವು ಪ್ರತಿಯೊಂದು ರಂಗದಲ್ಲಿ ದೇಶದ ಸರ್ವತೋಮುಖ ಬೆಳವಣಿಗೆಗಾಗಿ ಹಾಗೂ ದೇಶದ ರಕ್ಷಣೆಗಾಗಿ ದೂರದೃಷ್ಟಿಯ ನೀತಿ ನಿಯಮಗಳನ್ನು ರೂಪಿಸುವ ಮಹತ್ತರ ಜವಾಬ್ದಾರಿ ಹೊಂದಿದೆ. ಆದುದರಿಂದ ಶಾಸಕಾಂಗವು ಜ್ಞಾನಿಗಳು, ಕುಶಾಗ್ರಮತಿಯುಳ್ಳವರು, ಅನುಭವವುಳ್ಳವರು, ಪ್ರಾಮಾಣಿಕರು ಹಾಗೂ ಅರ್ಪಣಾ ಮನೋಭಾವದ, ನಾಯಕತ್ವ ಗುಣಗಳುಳ್ಳ ರಾಜಕಾರಣಿಗಳಿಂದ ತುಂಬಿ ತುಳುಕಬೇಕಿತ್ತು. ದುರದೃಷ್ಟವಶಾತ್ ಹಾಗಾಗದೆ ಸಂಪೂರ್ಣ ವಿರುದ್ಧಗುಣಗಳುಳ್ಳ ರಾಜಕಾರಿಣಿಗಳಿಂದಾಗಿ ಶಾಸಕಾಂಗವು ತನ್ನ ಪ್ರಾಮುಖ್ಯತೆಯನ್ನೂ ಮತ್ತು ಜನರ ವಿಶ್ವಾಸವನ್ನೂ ಕಳೆದುಕೊಂಡಿದೆ. ಹಾಗಾಗಿ ಚುನಾವಣೆಯಲ್ಲಿ ಯಾರು ಆಯ್ಕೆಯಾದರೇನು ಎಂದು ಜನರು ನಿರಾಸಕ್ತಿ ತೋರುವಂತಾಗಿದೆ.

ಶಾಸಕಾಂಗದ ಸುತ್ತ ಅಧಿಕಾರ ಕೇಂದ್ರೀಕೃತವಾಗಿದೆಯೆನಿಸಿದರೂ ಕೂಡಾ ನಿಜವಾದ ಅಧಿಕಾರ ಇರುವುದು ಕಾರ್ಯಾಂಗದಲ್ಲಿ. ಸರಕಾರೀ ವ್ಯವಸ್ಥೆಯಲ್ಲಿ ಮಾಡಿದ ಕೆಲಸಕ್ಕೆ, ಕೊಟ್ಟ ಮಾತಿಗೆ ಉತ್ತರದಾಯಿತ್ವ ಇರುವುದು ಈ ಅಂಗಕ್ಕೆ ಮಾತ್ರ. ಐ.ಎ.ಎಸ್, ಐ.ಪಿ.ಎಸ್ ಇತ್ಯಾದಿ ಪರೀಕ್ಷೆಗಳ ಮೂಲಕ ಅಧಿಕಾರಿಗಳ ಆಯ್ಕೆ ನಡೆಯುವುದರಿಂದ ತಕ್ಕಮಟ್ಟಿಗೆ ಈ ಅಂಗವು ತನ್ನ ಕಾರ್ಯಕ್ಷಮತೆ ಉಳಿಸಿಕೊಂಡಿದೆ.

ಶಾಸಕಾಂಗ ಕಾರ್ಯಾಂಗಗಳಲ್ಲಿ ಪ್ರತಿಭೆಯ ಕೊರತೆಯಿಂದಾಗಿ ಕಳೆದ 70 ವರ್ಷಗಳಲ್ಲಿ ನಮ್ಮ ಸರಕಾರಗಳು ಜನರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸಲು ಅಗತ್ಯಕ್ಕೆ ತಕ್ಕಂತೆ ಬೆಳೆಯದೇ, ಆಧುನಿಕ ತಂತ್ರಜ್ಞಾನವನ್ನು ಮೈಗೂಡಿಸಿಕೊಳ್ಳದೇ ವಿಫಲವಾಗುತ್ತಾ ಬಂದಂತೆ ಜನರ ಬೇಕು ಬೇಡಗಳನ್ನು ಹಾಗೂ ದಿನನಿತ್ಯದ ಅಗತ್ಯತೆಗಳನ್ನು ಪೂರೈಸಲು ಬೆಳೆದದ್ದು ಖಾಸಗೀ ರಂಗ. ಆಹಾರ, ಶಿಕ್ಷಣ, ಆರೋಗ್ಯ, ಸಾರಿಗೆ, ವಿದ್ಯುತ್, ಬ್ಯಾಂಕಿಂಗ್, ಅಂಚೆ, ಹೀಗೆ ಜನಸಾಮಾನ್ಯನಿಗೆ ದಿನನಿತ್ಯವು ಕೊಟ್ಟುಬಳಕೆಯಲ್ಲಿರುವ ಪ್ರತೀ ಕ್ಷೇತ್ರದಲ್ಲಿಯೂ ಸರಕಾರದ ಇಲಾಖೆಗಳು ಜನರ ನಿರೀಕ್ಷೆಗೆ ತಕ್ಕಂತೆ ಕ್ಷಮತೆ ತೋರದಿದ್ದಾಗ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಖಾಸಗೀರಂಗ ಬೆಳೆಯುತ್ತಾ ಬಂತು. ಅದು ಈಗ ಎಷ್ಟರ ಮಟ್ಟಿಗೆ ಬಂದು ನಿಂತಿದೆಯೆಂದರೆ ಸರಕಾರವು ತಾನು ಮಾಡಬೇಕಾದ ಕೆಲಸವನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟು ತನ್ನ ಕೆಲಸವನ್ನು ಕೇವಲ ತೆರಿಗೆ ಸಂಗ್ರಹಕ್ಕೆ ಮಾತ್ರ ಸೀಮಿತಗೊಳಿಸಿದಂತಿದೆ. ಸಂಗ್ರಹವಾದ ತೆರಿಗೆ ಹಣ ಎಲ್ಲಿ ಹೋಗುತ್ತದೆಯೋ ಗೊತ್ತಿಲ್ಲ. ನಮಗಂತೂ ನೀರು, ವಿದ್ಯುತ್, ಔಷಧಿ ಇತ್ಯಾದಿ ಪ್ರತಿಯೊಂದಕ್ಕೂ ಹಣ ಬಿಚ್ಚಬೇಕಾದ ಪರಿಸ್ಥಿತಿ ಇದೆ. ಹಾಗಿರುತ್ತಾ ರಾಜಕಾರಿಣಿಗಳಿಂದ ಈ ದೇಶ ನಡೆಯುತ್ತಿದೆ ಎಂದರೆ ಅದು ನಿಜವೇ? ನಿಜವಾಗಿಯಾದರೂ ಜನರ ಅಗತ್ಯತೆಗಳನ್ನು ಪೂರೈಸುತ್ತಿರುವ ಖಾಸಗೀರಂಗದಿಂದಲೇ ದೇಶ ನಡೆಯುತ್ತಿರುವುದು. ಜನರಿಗೆ ಉದ್ಯೋಗ ನೀಡುತ್ತಿರುವುದೂ ಖಾಸಗೀ ರಂಗವೇ ಆಗಿದೆ.

ಖಾಸಗೀ ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ, ವಿದ್ಯೆ, ಕೌಶಲ್ಯ, ಜ್ಞಾನ ಅನುಭವಗಳಿಗೆ ಆದ್ಯತೆ. ಆದುದರಿಂದಲೆ ಅದು ಪ್ರಸ್ತುತತೆಯನ್ನು ಉಳಿಸಿಕೊಂಡಿದೆ. ಬ್ರಾಹ್ಮಣರು ಈ ಎಲ್ಲಾ ಗುಣಗಳನ್ನು ಜನ್ಮದತ್ತವಾಗಿ ಹೊಂದಿರುವುದರಿಂದ ಖಾಸಗೀ ವ್ಯವಸ್ಥೆಯಲ್ಲಿ ಅವರೇ ಮುಂಚೂಣಿಯಲ್ಲಿದ್ದಾರೆ. ಅರ್ಥಾತ್ ಈ ದೇಶದ ಚುಕ್ಕಾಣಿ ಬ್ರಾಹ್ಮಣರ ಕೈಯಲ್ಲಿಯೇ ಇದೆ ಎಂದರ್ಥವಲ್ಲವೇ? ಈ ಚುಕ್ಕಾಣಿ ನಮ್ಮ ಕೈಯಲ್ಲಿಯೇ ಇನ್ನು ಮುಂದೆಯೂ ಇರಬೇಕಾದರೆ ನಾವು ವಿದ್ಯೆ ಹಾಗೂ ಕೌಶಲ್ಯದಲ್ಲಿ ಇನ್ನೂ ಹೆಚ್ಚು ಹೆಚ್ಚು ಪ್ರಾವೀಣ್ಯತೆ ಸಂಪಾದಿಸಿಕೊಳ್ಳಬೇಕು. ಯಾವತ್ತೂ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡಬಾರದು. ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುವುದೆಂದರೆ ಪರೋಕ್ಷವಾಗಿ ಕುಕ್ರತ ರಾಜಕಾರಣಿಗಳಿಗೆ ಪ್ರೋತ್ಸಾಹವಿತ್ತಂತೆ. ಪ್ರಾಮಾಣಿಕರಿಗೆ ಬೆಂಬಲ ನೀಡಬೇಕು ಹಾಗೂ ವೃತ್ತಿಪರ ಹಾಗೂ ಸಾಮಾಜಿಕ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದು ಒಗ್ಗಟ್ಟನ್ನು ಹಾಗೂ ಜನಬೆಂಬಲವನ್ನು ಉಳಿಸಿಕೊಳ್ಳಬೇಕು. ಆಗ ಜನಸೇವಕರೆಂದು ಕರೆಸಿಕೊಳ್ಳುವವರು ನಿಜಾರ್ಥದಲ್ಲಿಯೂ ಸೇವಕರಾಗುವರು.

**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

### ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-31

## ಗುಡೆಮಹಾಲಿಂಗೇಶ್ವರ ದೇವಸ್ಥಾನ, ಹೇರಂಜಾಲು, ಕುಂದಾಪುರ



ಕುಂದಾಪುರ ತಾಲೂಕಿನ ನಮ್ಮ ಸಮಾಜದ ಹೆಮ್ಮೆಯ ದೇವಾಲಯಗಳಲ್ಲೊಂದಿದು. ಈ ದೇವಾಲಯ ಕುಂದಾಪುರದಿಂದ ಬೈಂದೂರಿಗೆ ಹೋಗುವ ಹೆದ್ದಾರಿಯಲ್ಲಿ ಮರವಂತೆ ಬೀಚ್‌ನ ಬಳಿಕ ಸಿಗುವ ಊರು ಖಂಬದಕೋಣೆ. ಇಲ್ಲಿಂದ ಕೊಲ್ಲೂರಿಗೆ ಹೋಗುವ ರಸ್ತೆಯಲ್ಲಿ ಸಾಗಿದಾಗ ನಾಲ್ಕು ಕಿಲೋಮೀಟರ್ ದೂರದಲ್ಲಿ ಸಿಗುವ ಹೇರಂಜಾಲು ಗ್ರಾಮದಲ್ಲಿ ಈ ದೇವಸ್ಥಾನದ ಸ್ವಾಗತ ಗೋಪುರ ನಿಮ್ಮನ್ನು ಸ್ವಾಗತಿಸುತ್ತದೆ.

ದಾಖಲೆಗಳಲ್ಲಿರುವಂತೆ ಸುಮಾರು ಮುನ್ನೂರು ಶತಮಾನಗಳಿಂದ ಮೇರ್ಟ ಕುಟುಂಬಸ್ಥರು ಈ ದೇವಾಲಯದ ಅನುವಂಶಿಕ ಆಡಳಿತಗಾರರು. ಸದ್ಯ ಶ್ರೀ ಪದ್ಮನಾಭ ಮೇರ್ಟರು ಆಡಳಿತ ಮೊಕ್ತೇಸರರಾಗಿದ್ದಾರೆ. ಈ ದೇವಸ್ಥಾನಕ್ಕೆ ಎಂಟು ನೂರು ವರ್ಷಗಳ ಇತಿಹಾಸವಿದೆಯೆನ್ನುತ್ತಾರೆ. 2008ನೇ ಇಸವಿಯಲ್ಲಿ ಸಮಗ್ರ ಜೀರ್ಣೋದ್ಧಾರ ಕಂಡು ಸಂಪೂರ್ಣ ಶಿಲಾಮಯ ದೇವಸ್ಥಾನವಾಗಿದೆ.

ಶಿವಪುರಾಣದಲ್ಲಿ ಬರುವ ಭಕ್ತಮಾರ್ಕಾಂಡೇಯರ ಕಥೆ ನಡೆದ ಸ್ಥಳವಿದು. ಶಿವಭಕ್ತ ಮಾರ್ಕಾಂಡೇಯರು ಶಿವಲಿಂಗವನ್ನು ಅಪ್ಪಿಕೊಂಡಿದ್ದಾಗ ಯಮರಾಜ ಎಸೆದ ಪಾಶಕ್ಕೋ ಅಥವಾ ಮಾರ್ಕಾಂಡೇಯರ ಭಕ್ತಿಗೋ ಲಿಂಗವು ಒಡೆದು ಶಿವನು ಪ್ರತ್ಯಕ್ಷನಾಗಿ ಮಾರ್ಕಾಂಡೇಯರಿಗೆ ಅಮರತ್ವವನ್ನು ಕರುಣಿಸಿದನೆಂದು ಸ್ಥಳಪುರಾಣ ಹೇಳುತ್ತದೆ. ಅದಕ್ಕೆ ಪುರಾವೆಯಾಗಿ ಲಿಂಗದಲ್ಲಿ ಇಬ್ಭಾಗವಾಗಿ ಒಂದಾದ ಅಚ್ಚು ಈಗಲೂ ಕಾಣುತ್ತದೆ.

ಉಪದೇವರುಗಳಾಗಿ ವಿಘ್ನನಾಥ, ಶ್ರೀಮಾತಾ ಹಾಗೂ ನಾರಾಯಣೀ ದೇವರುಗಳ ಸನ್ನಿಧಿಯಿದೆ. ವಿಶಾಲವಾದ ಪೌಳಿ, ಪ್ರದಕ್ಷಿಣ ಪಥ, ರಾಜಗಾಂಭೀರ್ಯದ ರಥಬೀದಿ, 50 ಅಡಿಗಳಿಗೂ ಎತ್ತರದ ಭವ್ಯ ಬ್ರಹ್ಮರಥ ಈ ದೇವಾಲಯದ ಹಿರಿಮೆಯನ್ನು ಸಾರುತ್ತದೆ.

ನಿತ್ಯಪೂಜೆ, ನಿತ್ಯಸೇವೆಗಳು ಮಾತ್ರವಲ್ಲದೇ ಪ್ರತಿವರ್ಷ ರಥೋತ್ಸವವು ವಿಜೃಂಭಣೆಯಿಂದ ನೆರವೇರುತ್ತದೆ. ಸರ್ವರ ಸಹಭಾಗಿತ್ವದೊಂದಿಗೆ ಅನ್ನದಾನ ಸೇವೆ ಇಲ್ಲಿ ಈ ದಿನದಂದು ನಡೆಯುತ್ತದೆ. ರಥೋತ್ಸವದ ಸಮಯದಲ್ಲಿ ಸಾರ್ವಜನಿಕರು ರಂಗಪೂಜೆ ಸಲ್ಲಿಸುತ್ತಾರೆ.

ಪ್ರಸ್ತುತ ಶ್ರೀ ಹೆಚ್.ಪದ್ಮನಾಭ ಮೇರ್ಟರು ಇಲ್ಲಿಯ ಅನುವಂಶಿಕ ಆಡಳಿತ ಮೊಕ್ತೇಸರರಾಗಿದ್ದಾರೆ. ಅರ್ಚಕರಾಗಿ ಹಾಗೂ ತಂತ್ರಿಗಳಾಗಿ ಇತರರು ಸೇವೆ ಸಲ್ಲಿಸುತ್ತಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಹೆಚ್.ಪದ್ಮನಾಭ ಮೇರ್ಟರನ್ನು 9945800817ನಲ್ಲಿ ಸಂಪರ್ಕಿಸಬಹುದು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

*With Best Compliments from :*



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



# ಶ್ರೀ ಸುಬ್ರಹ್ಮಣ್ಯ ಸಭಾದ ಕಿರು ಪ್ರವಾಸ



ಪ್ರವಾಸ ತಾಣಗಳು ಎಂದ ತಕ್ಷಣ ನಮ್ಮ ನೆನಪಿನಂಗಳಕ್ಕೆ ಬರುವಂತಹದ್ದು ಪುಣ್ಯಕ್ಷೇತ್ರಗಳು, ದ್ವೀಪಗಳು, ರೆಸಾರ್ಟ್‌ಗಳು ಹೀಗೆ ಪ್ರಕೃತಿಯ ಹತ್ತು ಹಲವಾರು ಸ್ಥಳಗಳು.

ಈ ಬಾರಿಯ ಸುಬ್ರಹ್ಮಣ್ಯ ಸಭಾದ ಕಿರು ಪ್ರವಾಸ ಇಂತಹಾ ಒಂದು ಪ್ರೇಕ್ಷಣೀಯ ಸ್ಥಳವೂ ಹೌದು, ಆಕರ್ಷಣೀಯ ಸ್ಥಳವೂ ಹೌದು ಅಂತಹಾ ಕೆಮ್ಮಣ್ಣು ರೆಸಾರ್ಟ್‌ಗೆ ಏರ್ಪಡಿಸಲಾಗಿತ್ತು.

ಬೆಳಿಗ್ಗೆ ಸರಿ ಸುಮಾರು 7 ಗಂಟೆಗೆ ಸುಬ್ರಹ್ಮಣ್ಯ ಸಭಾದಿಂದ ಒಂದು ಬಸ್‌ನಲ್ಲಿ ಹೊರಟೆವು. ಬೆಳಗ್ಗಿನ ಉಪಹಾರಕ್ಕೆಂದು ಪಡುಬಿದ್ರಿಯ ಬಾಲಗಣಪತಿ ದೇವಸ್ಥಾನದ ಹೊರಾಂಗಣದಲ್ಲಿ ನಾವೆಲ್ಲಾ ಬಸ್ಸಿನಿಂದ ಇಳಿದು, ಮೊದಲಿಗೆ, ಎಲ್ಲರೂ ವಿನಾಯಕನ ದರ್ಶನವನ್ನು ಪಡೆದು ಅಲ್ಲಿಯೇ ರಸವತ್ತಾದ ರುಚಿಕರವಾದ ಇಡ್ಲಿ, ಸಾಂಬಾರ್, ಚಟ್ನಿ, ಚಾ, ಕಾಫಿಯನ್ನು ಸವಿದೆವು.

ಆ ಬಳಿಕ ಪುನಃ ಮುಂದಕ್ಕೆ ಸಾಗಿದ ಬಸ್ ನೇರವಾಗಿ ಉಡುಪಿಯಿಂದ 10 ಕಿ.ಮಿ. ಮುಂದೆ ಅಲ್ಲಿನ ಕೆಮ್ಮಣ್ಣು “ಫೆರಂಗಿ ರೆಸಾರ್ಟ್” ಬಳಿಗೆ ಸಾಗಿದವು. ಆ ರೆಸಾರ್ಟ್‌ನ ಮಾಲಿಕ ಜೋಸೆಫ್ ನಮ್ಮನ್ನು ತಂಪಾದ ಪಾನೀಯದೊಂದಿಗೆ ಸ್ವಾಗತಿಸಿ ನಮ್ಮೆಲ್ಲರನ್ನು ಮೂರು ದೋಣಿಗಳನ್ನು ಬಂಧಿಸಿ ಮಾಡಿದ ಒಂದು ದೋಣಿಯಲ್ಲಿ ಕುಳ್ಳಿರಿಸಿ ಸುಮಾರು 20–25 ನಿಮಿಷಗಳ ಪ್ರಯಾಣದ ಬಳಿಕ ನಮ್ಮನ್ನು ರೆಸಾರ್ಟ್‌ಗೆ ತಲುಪಿಸಿದರು.

ಅತ್ಯಂತ ಸುಂದರವಾದ ಮನಮೋಹಕವಾದ ಅದ್ಭುತವಾದ ಸ್ಥಳದಲ್ಲಿ ನಾವು ಹೋಗಿ ಕಾಲಿರಿಸುತ್ತಲೇ ಎಲ್ಲರೂ ಅಪಾರವಾದ ಸಂತೋಷದಿಂದ ವಯಸ್ಸಿನ ಮಿತಿಯಿಲ್ಲದೆ ಎಳೆಯವರಿಂದ ಪ್ರಾರಂಭವಾಗಿ ಹಿರಿಯವರವರೆಗೂ ವಿಶಾಲವಾದ ಮರದಡಿಯಲ್ಲಿ ಕಟ್ಟಿದಂತಹ ಜೋಕಾಲಿಯಲ್ಲಿ, ಜಾರು ಬಂಡಿಯಲ್ಲಿ, ಹಗ್ಗದ ಜೋಕಾಲಿಗಳಲ್ಲಿ, ನೀರಿನಲ್ಲಿ ಹೀಗೆ ಎಲ್ಲೆಂದರಲ್ಲಿ ಸಮಯವನ್ನು ಕಳೆಯುವುದಕ್ಕೆ ಪ್ರಾರಂಭಿಸಿದರು.

ಹೌದು, ಅದೊಂದು ವಿಶೇಷವಾದ ದ್ವೀಪ, ನಡುವಿನಲ್ಲಿ ಭೂಮಿ, ಸುತ್ತಲೂ ಆವರಿಸಿಕೊಂಡಿರುವ ನೀರು, ಕಣ್ಮನ ಸೆಳೆಯುವಂತಹ ದೃಶ್ಯ. ನೀರಿನಲ್ಲಿ ಈಜಾಡಿದೆವು, ಮುಳುಗು ಹಾಕಿದೆವು. ಚೆಂಡಾಟವಾಡಿದೆವು. ಅಲ್ಲಿಯ ಮಾಲಿಕ ವಿಶೇಷವಾಗಿ ನೀರಿನಲ್ಲಿ ‘ಶವಾಸನ’ವನ್ನು ಹೇಗೆ ಮಾಡಬೇಕು ಎನ್ನುವುದನ್ನು ಪ್ರತಿಯೊಬ್ಬರಿಗು ಕಲಿಸಿಕೊಟ್ಟರು. ಈಜು ಬರದಂತವರು ಸಹ ಶವಾಸನ ಕಲಿತು ನೋಡು ನೋಡುತ್ತಿದ್ದಂತೆ ತೇಲುತ್ತಾ ಒಂದು ಕಿ.ಮಿ.ನ ಪರದಿಯಲ್ಲಿ ಕಟ್ಟಿದಂತಹ ಹಗ್ಗದ ಕೊನೆಯನ್ನು ತಲುಪಿ ಆಚ್ಚರಿಗೊಂಡರು ಉಪ್ಪು ನೀರಿನ ಮಿಶ್ರಣದ ಈ ನೀರು ಮನುಷ್ಯನನ್ನು ಸುಲಭವಾಗಿ ತೇಲಾಡಿಸುವ ಗುಣ ಹೊಂದಿದೆಯೆಂದು ಮತ್ತು ಇಲ್ಲಿನ ರೆಸಾರ್ಟ್‌ಗೆ ಕೇವಲ “ಶವಾಸನ” ಮಾಡಲು ದೂರ ದೂರದಿಂದ ಪ್ರವಾಸಿಗರು ಬರುವರೆಂದು ಜೋಸೆಫ್ ತಿಳಿಸಿದರು. ಸುತ್ತಮುತ್ತ ಕಣ್ಣನ್ನು ಹಾಯಿಸುವಷ್ಟು ನೀರು. ಆ ನೀರಿನಲ್ಲಿ ಆಟವಾಡುತ್ತಾ ಸಮಯ ಜಾರಿದ್ದೇ ತಿಳಿಯಲಿಲ್ಲ. ಮಧ್ಯಾಹ್ನ ಗಂಟೆ 1.30 ನೀರಿನಿಂದ ಎಲ್ಲರೂ ಮೇಲೆದ್ದು ಬಂದು ಭೋಜನಕ್ಕೆಂದು ಪಡುಬಿದ್ರಿಯಿಂದ ತಯಾರಿಸಿ ತೆಗೆದುಕೊಂಡು ಹೋದಂತಹಾ ಚಪಾತಿ, ಕೂರ್ಮ, ಅನ್ನ, ಸಾರು, ಸಾಂಬಾರ್, ಪಾಯಸ ಹೀಗೆಯೇ ಎಲ್ಲವನ್ನೂ ಸವಿದೆವು.

ನಿಸರ್ಗದ ಸೌಂದರ್ಯವನ್ನು ಸವಿಯುತ್ತಾ ಭೋಜನ ವಿರಾಮದ ಬಳಿಕ ಸಮಾಜ ಬಾಂಧವರೆಲ್ಲರೂ ಸೇರಿ ಸಮಾನ ಮನಸ್ಕರಾಗಿ ಹೌಸಿ ಹೌಸಿ, ಮ್ಯೂಸಿಕ್ ಚೇರ್, ಹಗ್ಗ ಜಗ್ಗಾಟ, ಹೀಗೆ ಪ್ರವಾಸಿಗರ ಮನದಲ್ಲಿ ಅಚ್ಚೊತ್ತುವಂತಹ ಆಟಗಳನ್ನು ಆಡಿದೆವು. ಮನಬಿಚ್ಚಿ ಕುಣಿದಾಡಿದೆವು.

ಸೂರ್ಯನು ಪಶ್ಚಿಮದ ಕಡೆಗೆ ಜಾರುತ್ತಾ ಇರುವಂತೆಯೇ ನಾವು ನಮ್ಮ ಪ್ರಯಾಣವನ್ನು ಅಲ್ಲಿಂದ ಮುಂದುವರಿಸಿ ಪುನಃ ಅದೇ ದೋಣಿಯಲ್ಲಿ ಕುಳಿತು ಪ್ರಕೃತಿ ಮಾತೆಯ ಸೊಗಸನ್ನು ಆನಂದಿಸುತ್ತಾ, ಅನುಭವಿಸುತ್ತಾ ಒಲ್ಲದ ಮನಸ್ಸಿನಿಂದ ಹಿಂದಿರುಗಿದೆವು.


ಶ್ರೀ ರಘುವೀರ್ ಪೆರ್ಡೂರು ಸ್ಥಳದಲ್ಲೇ ಆಕರ್ಷಕ ರೇಖಾ ಚಿತ್ರ ಬಿಡಿಸಿ ಎಲ್ಲರ ಮೆಚ್ಚುಗೆ ಪಡೆದರು. ಯುವ ವೇದಿಕೆಯ ಶ್ರೀಮನೀಶ್ ರಾವ್, ಶ್ರೀ ಸುರೇಶ ಕಡಬ, ಮಹಿಳಾ ವೇದಿಕೆಯ ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್, ಡಾ.ಜಯಲಕ್ಷ್ಮೀ, ಶ್ರೀಮತಿ ಕುಸುಮ ನವೀನ್ ಕುಮಾರ್, ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ಸಂಯೋಜಿಸಿದರು.

# ಶ್ರೀ ರಾಮಧಾಮದಲ್ಲಿ ರಾಮನವಮಿ

ಕಾರ್ಕಳ ಜೋಗುಳಬೆಟ್ಟಿನ “ಶ್ರೀ ರಾಮಧಾಮಧ್ಯಾನಮಂದಿರದಲ್ಲಿ ಶ್ರೀರಾಮ ನವಮಿಯನ್ನು ಇದೇ ಕಳೆದ ಮಾರ್ಚ್ 25 ರಂದು ಸಂಭ್ರಮದಲ್ಲಿ ಆಚರಿಸಲಾಯಿತು. ಬ್ರಹ್ಮಶ್ರೀ ವಾಗೀಶ ಶಾಸ್ತ್ರೀಯವರ ಮಾರ್ಗದರ್ಶನದಂತೆ, ಹೆಜಮಾಡಿ ಶ್ರೀ ಕೃಷ್ಣರಾಜ ಭಟ್‌ರವರ ಪೌರೋಹಿತ್ಯದಲ್ಲಿ, ಸಹಾಯಕರಾಗಿ ಶ್ರೀ ಎರ್ಮಾಳು ನಾಗರಾಜರಾವ್‌ರೊಂದಿಗೆ ಬೆಳಗ್ಗೆ ಶುದ್ಧ ಪುಣ್ಯಾಹ, ನಾಗಪೂಜೆ, ಗಣಪತಿ ಹವನ ಹಾಗೂ ಶ್ರೀ ರಾಮ ತಾರಕ ಹೋಮವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು ರಾಮಮಂದಿರದ ರೂವಾರಿಯಾಗಿದ್ದು ಕಳೆದ ವರ್ಷ ಭಗವತ್ ಸಾಯುಜ್ಯ ಸೇರಿದ ಶಶಿಧರ ಕೊಲ್ಪೆಯವರು (ಇವರು ಸುಮಾರು ಎರಡು ದಶಕಗಳು ಮೇಲ್ಪಟ್ಟು ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಳದಲ್ಲಿ ವ್ಯವಸ್ಥಾಪಕರಾಗಿಯೂ ಸೇವೆ ಸಲ್ಲಿಸಿದ್ದರು) ತಮ್ಮ ಜೀವಿತಾವಧಿಯಲ್ಲಿ ಬರೆದ ಶ್ರೀರಾಮ ನಾಮ ಲೇಖನದ ನೂರಾರು ಪುಸ್ತಕಗಳಿಗೆ ಪೂಜೆ ಸಲ್ಲಿಸಿ ಶ್ರೀ ರಾಮತಾರಕ ಹೋಮ ಮುಖೇನ ಉದ್ಯಾಪನೆ ಮಾಡಲಾಯಿತು. ಮಧ್ಯಾಹ್ನ ಸಪರಿವಾರ ಶ್ರೀ ರಾಮ ಚಂದ್ರನಿಗೆ ಮಂಗಳಾರತಿ ನಂತರ ನಡೆದ ಪ್ರಸಾದ ಭೋಜನದಲ್ಲಿ ಸಂಬಂಧಿಕರು/ಆಮಂತ್ರಿತರು ಭಾಗಿಯಾದರು. ಅದೇ ದಿನ ಸಂಜೆ ‘ಸಪ್ತಶತಿ ಪಾರಾಯಣ’ ಸಹಿತ ದುರ್ಗಾನಮಸ್ಕಾರ ಪೂಜೆ ನೆರವೇರಿಸಲಾಯಿತು. ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಕೊಲ್ಪೆಯವರು ಮಂತ್ರಾಕ್ಷತೆ ಸ್ವೀಕರಿಸಿ ಕುಟುಂಬಸ್ಥರನ್ನು ಹರಸಿದರು. ಸದ್ಯ ಶ್ರೀ ರಾಮ ಮಂದಿರದ ಉಸ್ತುವಾರಿ ನೋಡುತ್ತಿರುವ ಶ್ರೀ ಚಂದ್ರಶೇಖರ ಕೊಲ್ಪೆ ಹಾಗೂ ವಿಠಲರಾವ್ ಕೊಲ್ಪೆಯವರು ಕಾರ್ಯಕ್ರಮ ನಿರ್ವಿಘ್ನವಾಗಿ ನೆರವೇರಲು ಸಹಕರಿಸಿದರು.

**ವರದಿ: ಜಿ.ಕೆ ಕೊಲ್ಪೆ, ಉಡುಪಿ.**

## ನಿಧನ



### ನಿವೃತ್ತ ಉಪನ್ಯಾಸಕ ಶ್ರೀ ಕಾರ್ಕಳ ಸೂರ್ಯನಾರಾಯಣ ರಾವ್

ಕಾರ್ಕಳ ನಿವಾಸಿ, ನಿವೃತ್ತ ಉಪನ್ಯಾಸಕ ಕಾರ್ಕಳ ಸೂರ್ಯನಾರಾಯಣ ರಾವ್ (89) ಅವರು ತಾ. 03.04.2018ರಂದು ನಿಧನ ಹೊಂದಿದರು.

ಮೃತರು ಪತ್ನಿ ಶ್ರೀಮತಿ ಇಂದಿರಾ, ಪುತ್ರ ಕೆಎಂಸಿ ಮಣಿಪಾಲದ ಅಸೋಸಿಯೇಟ್ ಡೀನ್ ಡಾ। ಶರತ್ ರಾವ್, ಪುತ್ರಿಯರಾದ ದುಬ್ಯಾಯ ರೇಡಿಯಾಲಜಿಸ್ಟ್ ಡಾ। ಶರಣ್ಯಾ ಭಟ್ ಮತ್ತು ಯುಎಸ್‌ಎಯಲ್ಲಿ ಅನಸ್ತೇಶಿಯಾ ತಜ್ಞೆಯಾಗಿರುವ ಸಂಧ್ಯಾ ಭಟ್ ಅವರನ್ನು ಅಗಲಿದ್ದಾರೆ.

ಅವರು ಬಾರ್ಕೂರು ಮತ್ತು ಮೂಲ್ಕಿ ಹೈಸ್ಕೂಲಿನಲ್ಲಿ ಬೋಧಕರಾಗಿ ಸೇವೆ ನಿರ್ವಹಿಸಿ ಕೆಮಿಸ್ಟ್ರಿ ಉಪನ್ಯಾಸಕರಾಗಿ ಕಾರ್ಕಳ ಭುವನೇಂದ್ರ ಕಾಲೇಜಿಗೆ ಸೇರಿ ಅಲ್ಲಿ ಕೆಮಿಸ್ಟ್ರಿ ಪ್ರೊಫೆಸರ್ ಮತ್ತು ವಿಭಾಗ ಮುಖ್ಯಸ್ಥರಾಗಿ 28 ವರ್ಷ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಕಲಿಕೆಗಾಗಿ ಅವರು ಕಿಣಿ ಜತೆ ಸೇರಿ ಬರೆದ ಕೆಮೆಸ್ಟ್ರಿ ಪಠ್ಯಪುಸ್ತಕವು ಅತ್ಯಂತ ಜನಪ್ರಿಯವಾಗಿತ್ತು.

★★★★ ★★★★

### ಶ್ರೀ ಕೆ. ರಾಮಕೃಷ್ಣ ರಾಯರು

ನಮ್ಮ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ.ಸುರೇಶರಾಯರ ಅಗ್ರಜ ಶ್ರೀ ಕೆ. ರಾಮಕೃಷ್ಣ ರಾಯರು ತಾ. 18.03.2018ರಂದು ಕೊಕ್ರಾಡಿಯಲ್ಲಿ ನಿಧನ ಹೊಂದಿದರು ಅವರಿಗೆ 68 ವರ್ಷ ಪ್ರಾಯವಾಗಿತ್ತು.

★★★★ ★★★★

### ಶ್ರೀಮತಿ ವಿಶಾಲಾಕ್ಷಿ ಅಮ್ಮ

ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಗ್ರಂಥಪಾಲಕರಾಗಿರುವ ಶ್ರೀ ಅಡೂರು ಹರಿಕೃಷ್ಣರಾಯರ ತಾಯಿ ಶ್ರೀಮತಿ ವಿಶಾಲಾಕ್ಷಿ ಅಮ್ಮನವರು ತಾ. 03.04.2018ರಂದು 76ನೇ ವರ್ಷ ವಯಸ್ಸಿನಲ್ಲಿ ನಿಧನ ಹೊಂದಿದರು.

## ಮೇಷ ಮಾಸದ ವಿಶೇಷ ದಿನಗಳು

| | | | |
|---|---|---|---|
| **14–04–2018** | ಮೇಷ ಸಂಕ್ರಮಣ | **30–04–2018** | ವೈಶಾಖ ಹುಣ್ಣಿಮೆ |
| **15–04–2018** | ಸೌರಮಾನ ಯುಗಾದಿ | **01–05–2018** | ವೈಶಾಖ ಮಾಸ ಕೃಷ್ಣ ಪಕ್ಷಾರಂಭ |
| **16–04–2018** | ಅಮಾವಾಸ್ಯೆ ಮತ್ತು ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷಾರಂಭ | **03–05–2018** | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.44 |
| **18–04–2018** | ಅಕ್ಷಯ ತೃತೀಯ | **11–05–2018** | ಸರ್ವೈಕಾದಶಿ |
| **20–04–2018** | ಶಂಕರ ಜಯಂತಿ, ಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ | **14–05–2018** | ವೃಷಭ ಸಂಕ್ರಮಣ |
| | | **15–05–2018** | ಅಮಾವಾಸ್ಯೆ |
| | | **16–05–2018** | ಅಧಿಕ ಜೇಷ್ಠಾ ಮಾಸ ಶುಕ್ಲಪಕ್ಷಾರಂಭ |
| **26–04–2018** | ಸರ್ವೈಕಾದಶಿ | | |

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೊಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್

## ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕುಸುಮಾರವರಿಗೆ ವಿದಾಯ



ಸುರತ್ಕಲ್ ಅನುದಾನಿತ ವಿದ್ಯಾದಾಯಿನೀ ಪ್ರೌಢಶಾಲೆಯಲ್ಲಿ 31 ವರ್ಷಗಳ ಕಾಲ ಸಹಶಿಕ್ಷಕಿಯಾಗಿ ಹಾಗೂ ಸುಮಾರು 5 ವರ್ಷಗಳಿಂದ ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿ. ಇದೇ ತಿಂಗಳ 31 ರಂದು ಸೇವೆಯಿಂದ ವಯೋನಿವೃತ್ತಿಗೊಳ್ಳಲಿರುವ ಶ್ರೀಮತಿ ಕುಸುಮಾ ಇವರಿಗೆ ವಿದ್ಯಾರ್ಥಿಗಳು ವಿದಾಯ ಸಮಾರಂಭವನ್ನು ಏರ್ಪಡಿಸಿದರು. ಎಲ್ಲಾ ತರಗತಿಯ ನಾಯಕರು ಜೊತೆಯಾಗಿ ವೇದಿಕೆಗೆ ಬಂದು ಮಾನ್ಯ ಮುಖ್ಯೋಪಾಧ್ಯಾಯಿನಿಯವರಿಗೆ ಹೂಗುಚ್ಛ ನೀಡಿ ಗೌರವ ಸಲ್ಲಿಸಿದರು. ವಿದ್ಯಾರ್ಥಿಗಳು ಆತ್ಮವಿಶ್ವಾಸ, ಅಹಿಂಸೆ, ಪ್ರಾಮಾಣಿಕತೆ, ಸಮಯಪ್ರಜ್ಞೆ, ವಿಧೇಯತೆ ಇತ್ಯಾದಿ ಗುಣಗಳನ್ನು ಮೈಗೂಡಿಸಿಕೊಂಡು ಭವಿಷ್ಯತ್ತಿನಲ್ಲಿ ಉತ್ತಮ ನಾಗರಿಕರಾಗಿ ಬಾಳಿ ತಾವು ಕಲಿತ ಶಾಲೆಗೂ, ಹೆತ್ತವರಿಗೂ ಕೀರ್ತಿಯನ್ನು ತರುವಂತಾಗಲಿ ಎಂದು ಆಶೀರ್ವದಿಸಿದರು. ಈ ಸಂದರ್ಭದಲ್ಲಿ 2017–18ನೇ ಸಾಲಿನ ಅತ್ಯುತ್ತಮ ವಿದ್ಯಾರ್ಥಿ ನಾಯಕ, ಅತ್ಯುತ್ತಮ ಉಪನಾಯಕಿ, ಕ್ರೀಡೆ ಹಾಗೂ ಲಲಿತಕಲೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆಯನ್ನು ಕೊಡುಗೆಯಾಗಿ ನೀಡಿ ಪ್ರೋತ್ಸಾಹಿಸಿದರು. ಎಲ್ಲಾ ವಿದ್ಯಾರ್ಥಿಗಳಿಗೂ ಉಡುಗೊರೆ ನೀಡಿದರು. ಮಕ್ಕಳೊಂದಿಗೆ ಜೊತೆಯಾಗಿ ಐಸ್‌ಕ್ರೀಂ ಸವಿದು ತನ್ನ ಸಂತೋಷವನ್ನು ವ್ಯಕ್ತಪಡಿಸಿದರು. ವರ್ಷಿತಾ ಮತ್ತು ಲಾವಣ್ಯ ಭಟ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಕುಸುಮಾರವರು ಸುರತ್ಕಲ್ ಸಂಘದ ಅಧ್ಯಕ್ಷರಾದ ಶ್ರೀ ಮಾಧವರಾವ್‌ರವರ ಪತ್ನಿ.

## ವಿಶ್ವ ಮಹಿಳಾ ದಿನಾಚರಣೆ : ಸಾಹಿತಿ ಶ್ರೀಮತಿ ಸಾವಿತ್ರಿ ಮನೋಹರ್‌ರವರಿಗೆ ಸನ್ಮಾನ




"ನಿಮ್ಮ ಮನೆಯ ಈ ಹಜಾರವೇ ಒಂದು ವಿಶ್ವದಂತಿದೆ. ಗೋಡೆಕಪಾಟುಗಳಲ್ಲಿ ತುಂಬಿ ತುಳುಕುತ್ತಿರುವ ಸನ್ಮಾನ ಪತ್ರಗಳು, ಫಲಕಗಳು, ಹಾರತುರಾಯಿಗಳು, ರಾಶಿ ರಾಶಿ ಸ್ಮರಣಿಕೆಗಳು ತಮ್ಮ ಸಾಧನೆಗೆ ಸಾಕ್ಷಿಯಾಗಿವೆ. ಕಪಾಟುಗಳಲ್ಲಿ ತುಂಬಿರುವ ಸ್ವರಚಿತ ಗ್ರಂಥಗಳು ತಮ್ಮ ಸಾಹಿತ್ಯ ಪ್ರತಿಭೆಗೆ ಸಾಕ್ಷಿಯಾದರೆ, ಕನ್ನಡಿ ಕಪಾಟುಗಳಲ್ಲಿ ಕಂಗೊಳಿಸುತ್ತಿರುವ ಮಹಾನ್ ಗ್ರಂಥಗಳು ತಮ್ಮ ಸಾಹಿತ್ಯಾಭ್ಯಾಸಕ್ಕೆ ಸಾಕ್ಷಿಯಾಗಿವೆ. ಸುಂದರವಾಗಿ ಜೋಡಿಸಿಟ್ಟ ಶೀಲ್ಡ್‌ಗಳು ತಮ್ಮ ಕ್ರೀಡಾ ಸಾಧನೆಯ ಪ್ರತೀಕವಾಗಿವೆ. ಎಲ್ಲಕ್ಕಿಂತ ಎತ್ತರವಾಗಿ ನಿಂತಿರುವ ಗಂಧದ ಧ್ವಜಸ್ತಂಭ ತಮ್ಮ ದೇಶಭಕ್ತಿಗೆ, ದೇಶ ಸೇವೆಗೆ ರಾಜ್ಯ ಸರಕಾರ ನೀಡಿದ ಉನ್ನತ ಪ್ರಶಸ್ತಿಯಾಗಿದೆ. ತಮ್ಮಂತಹ ಶ್ರೇಷ್ಠ ಮಹಿಳೆಯನ್ನು ತಮ್ಮ ಮನೆಗೆ ಬಂದು ಸನ್ಮಾನಿಸಲು ನಮಗೆ ಹೆಮ್ಮೆ ಎನಿಸುತ್ತದೆ" ಎಂದು ಜೇಸಿಐ ರೂರಲ್‌ನ ಸ್ಥಾಪಕ ಅಧ್ಯಕ್ಷ ಶ್ರೀ ಸತೀಶ್ ಪೂಜಾರಿ ನುಡಿದರು.

ಅವರು 8–3–2018ರಂದು ಮನೆಯಲ್ಲೇ ಮಹಿಳಾ ಸನ್ಮಾನ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಸುದೀರ್ಘ ಸೇವೆಯಿಂದ, ಸಂತೃಪ್ತಿಯ ನಿವೃತ್ತಿ ಪಡೆದು, ಪತಿಯೊಡನೆ 'ವಾಸುಕಿ'ಯಲ್ಲಿ ವಾಸಿಸುತ್ತಿದ್ದರೂ ಶಿಕ್ಷಣ, ಸ್ಕೌಟ್ಸ್ ಗೈಡ್ಸ್, ಮಹಿಳಾ ಅಭಿವೃದ್ಧಿ, ಸಾಹಿತ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಶ್ರೀಮತಿ ಸಾವಿತ್ರಿ ಮನೋಹರ್ ನಮ್ಮಂತಹ ಕಿರಿಯರಿಗೆ ದಾರಿದೀಪವಾಗಿದ್ದಾರೆ, ಆದರ್ಶ ಮಹಿಳೆಯಾಗಿದ್ದಾರೆ ಎಂದು ಜೇಸಿರೇಟ್ ಅಧ್ಯಕ್ಷೆ ಶ್ರೀಮತಿ ಹರ್ಷ ನುಡಿದರು. ಜೇಸಿ ಅಧ್ಯಕ್ಷ ಶ್ರೀ ಸಂತೋಷ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಸದಸ್ಯರೊಂದಿಗೆ ಶ್ರೀಮತಿ ಸಾವಿತ್ರಿ ಮನೋಹರರನ್ನು ಶಾಲು ಹೊದಿಸಿ, ಹಾರ ಹಾಕಿ, ಫಲ ತಾಂಬೂಲ ನೀಡಿ, ಸ್ಮರಣಿಕೆ ಇತ್ತು ಸನ್ಮಾನಿಸಿದರು. ಸನ್ಮಾನಿತರ ಪತಿ ಶ್ರೀ ಮನೋಹರ ರಾವ್‌ರವರು ಉಪಸ್ಥಿತರಿದ್ದರು.

## ಡಾ। ವೈ.ರವೀಂದ್ರನಾಥ ರಾವ್‌ರವರ ಉಪನ್ಯಾಸ



ಕುಂದಾಪುರದಲ್ಲಿ ರಾಜ್ಯಮಟ್ಟದ ಬುಡಕಟ್ಟು ಜನಾಂಗದವರ ಸಮಾವೇಶದಲ್ಲಿ ಡಾ। ವೈ.ರವೀಂದ್ರನಾಥ ರಾವ್‌ರವರು ಅತಿಥಿಯಾಗಿ ಭಾಗವಹಿಸಿ ಕುಡುಬಿ ಜನಾಂಗದ ಬಗ್ಗೆ ಉಪನ್ಯಾಸವಿತ್ತರು.

## ಶ್ರೀಮತಿ ರಾಧಾ ಮುರಳೀಧರರವರ ಸಂಗೀತ ಕಾರ್ಯಕ್ರಮ



ಕನ್ನಡ ಸಾಹಿತ್ಯ ಪರಿಷತ್ತು ಕೇರಳ ಗಡಿನಾಡ ಘಟಕದ ಆಶ್ರಯದಲ್ಲಿ ನಡೆದ 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾಸರಗೋಡಿನ ವಿದುಷಿ ಶ್ರೀಮತಿ ರಾಧಾ ಮುರಳೀಧರ ಇವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು. ಇವರಿಗೆ ಪಕ್ಕವಾದ್ಯದಲ್ಲಿ ಮೃದಂಗದಲ್ಲಿ ಡಾ.ಶಂಕರ್ ರಾಜ್ ಹಾಗೂ ವಯಲಿನ್‌ನಲ್ಲಿ ಶ್ರೀ ಪ್ರಭಾಕರ ಕುಂಜಾರು ಸಹಕರಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ಸನ್ಮಾನದ ತುರಾಯಿ



ಸುಬ್ರಹ್ಮಣ್ಯದಲ್ಲಿ ತಾ.07–03–2018ರಂದು ನಡೆದ 22ನೇಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು ಸಂಸ್ಥೆಯನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಶ್ರೀಸಭಾದ ಅಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವ ಸಂಸ್ಥೆಯ ಪರವಾಗಿ ಸನ್ಮಾನ ಸ್ವೀಕರಿಸಿದರು. ದ.ಕ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪ್ರದೀಪ ಕುಮಾರ್ ಕಲ್ಕೂರ, ಸಮ್ಮೇಳನದ ಅಧ್ಯಕ್ಷೆ ಶ್ರೀಮತಿ ಎ. ಪಿ. ಮಾಲತಿ, ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರು, ಶ್ರೀ ಸಂತೋಷ ಕುಮಾರ್ ಯು, ಶ್ರೀ ಸಭಾದ ಲೆಕ್ಕ ಪರಿಶೋಧಕರಾದ ಶ್ರೀ ನಾಗರಾಜ ಶರ್ಮ, ಮಹಿಳಾ ವೇದಿಕೆಯ ಪದಾಧಿಕಾರಿಗಳು, ಹಾಗೂ ಶ್ರೀ ಸಭಾದ ಸದಸ್ಯರು ಉಪಸ್ಥಿತರಿದ್ದರು.

## ಭಜನಾ ಕಾರ್ಯಕ್ರಮ



ಪಾವಂಜೆ ಜ್ಞಾನ ಶಕ್ತಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾರೀಕು 14–01–2018ರಂದು ಪಾವಂಜೆ ಶ್ರೀ ಲಕ್ಷ್ಮೀನಾರಾಯಣಪ್ಪಯ್ಯ ಸ್ಮರಣಾರ್ಥ ನಡೆದ ಅಖಂಡ ಭಜನಾ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯ ಸದಸ್ಯರಿಂದ ಭಜನಾ ಕಾರ್ಯಕ್ರಮ ನಡೆಯಿತು ತಬಲಾದಲ್ಲಿ ಶ್ರೀ ಕಾರ್ತಿಕ್ ಕುಡುಪು ಸಹಕರಿಸಿದರು.




SAMPATH KUMAR Mobile : 9741508881

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ.

ಭಕ್ತಾಭಿಮಾನಿಗಳೇ,

ಇದೇ ಬರುವ ತಾರೀಕು 28–04–2018ನೇ ಶನಿವಾರದಂದು ಶ್ರೀ ದೇವಳದಲ್ಲಿ

### ನರಸಿಂಹ ಜಯಂತಿ ಮಹೋತ್ಸವವು

ಶ್ರೀ ಕ್ಷೇತ್ರದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀಗಳ ನೇತೃತ್ವದಲ್ಲಿ ಬೆಳಗ್ಗೆ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ ಹಾಗೂ ಸಂಜೆ ಶ್ರೀ ದೇವರಿಗೆ ರಂಗಪೂಜೆಯೊಂದಿಗೆ ನೆರವೇರಲಿರುವುದು.

ಭಕ್ತಾಭಿಮಾನಿಗಳಾದ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ದೇವರ ಸಿರಿಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಕೃತಾರ್ಥರಾಗಬೇಕಾಗಿ ವಿನಂತಿ. ಅಂದು ಮಧ್ಯಾಹ್ನ, ಭೋಜನ ಪ್ರಸಾದವು ನಡೆಯುಲಿದೆ.

**ಆಡಳಿತ ಮಂಡಳಿ**

**ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು**

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ

ಪಾವಂಜೆ, ಹಳೆಯಂಗಡಿ

ಆತ್ಮೀಯರೇ,

ಶ್ರೀ ಹೇಮಲಂಬಿ ನಾಮ ಸಂವತ್ಸರದ ಮೀನಮಾಸ ೩೦ ಸಲುವ ದಿನಾಂಕ 13–04–2018ನೇ ಶುಕ್ರವಾರದಿಂದ ವಿಲಂಬಿ ನಾಮ ಸಂವತ್ಸರದ ಮೇಷ ಮಾಸ ೫ ಸಲುವ ದಿನಾಂಕ 19–04–2018ನೇ ಗುರುವಾರದವರೆಗೆ

### ವಾರ್ಷಿಕ ಉತ್ಸವವು

ನಡೆಯಲಿರುವುದು.

ದಿನಾಂಕ 19–04–2018ನೇ ಗುರುವಾರದಂದು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಗೆ


### ಬ್ರಹ್ಮಕಲಶಾಭಿಷೇಕವು

ನೆರವೇರಲಿರುವುದು.

ಈ ಎಲ್ಲಾ ದಿನಗಳಲ್ಲಿ ತಾವೆಲ್ಲರೂ ಬಂದು ಉತ್ಸವದಲ್ಲಿ ಭಾಗವಹಿಸಿ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

**ಯಂ. ಶಶೀಂದ್ರ ಕುಮಾರ್ ಆಡಳಿತ ಮೊಕ್ತೇಸರರು**
**ಡಾ। ಯಾಜಿ ಎಚ್. ನಿರಂಜನ ಭಟ್, ಧರ್ಮದರ್ಶಿಗಳು**
**ಮತ್ತು ಆಡಳಿತ ಮಂಡಳಿಯ ಸದಸ್ಯರು**


**ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :**
**ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.**



**N. Laxmi Prasad**



**ಕಾರ್ಯಕಾರಿಣಿ ಮಂಡಳಿ ಸದಸ್ಯರು**

**D. K. District Used Vehicle Dealers & Agents Association (R.), Mangalore**
**Flat No. 103, Deepa Residency, Near Preethi Apartment**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997 E-mail : laxmiprasad5010@gmail.com



With Best Compliments From :

Ph : 98459 92859

**Ganesh Hebbar & Associates**
CHARTERED ACCOUNTANT

S.M.S.P. Complex, Udupi - 576 101.



**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಇಲ್ಲಿ
**ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರೆ ಮತ್ತು ಶ್ರೀ ವಿಷ್ಣುಮೂರ್ತಿ ದೇವಸ್ಥಾನ (ರಿ) ಪಾದೆಬೆಟ್ಟು ಇದರ ಸಂಯೋಜನೆಯಲ್ಲಿ**
**ತಾರೀಕು 17–04–2018 ರಿಂದ 28–04–2018 ರವರೆಗೆ ಶ್ರೀ ದೇವಳದಲ್ಲಿ.**

### "ವೈದಿಕ ಶಿಬಿರ"ವು

ನಡೆಯಲಿದ್ದು ನಮ್ಮ ಸಮಾಜದ ಎಲ್ಲಾ ವಟುಗಳು ಭಾಗವಹಿಸಿ ಈ ಶಿಬಿರದ ಪ್ರಾಯೋಜನವನ್ನು ಪಡೆದುಕೊಳ್ಳಬೇಕಾಗಿ ಆಶಿಸುತ್ತೇವೆ.

**– ಆಡಳಿತ ಮಂಡಳಿ**

**ಈ ಶಿಬಿರದ ಪ್ರಧಾನ ಪ್ರಾಯೋಜಕರು :**
**ಎಲ್ಲೂರು ಶ್ರೀ ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್ (ರಿ) ಮತ್ತು ಇನ್ನ ಎ.ಬಿ.ಸಿ.ಡಿ & ಇ ಟ್ರಸ್ಟ್ (ರಿ). ಇನ್ನ**

**ವಿಶೇಷ ಸೂಚನೆ :**
1. ವಟುಗಳು ಸಂಧ್ಯಾವಂದನೆಗೆ ಬೇಕಾದ ಪಂಚಪಾತ್ರೆ ಹಾಗೂ ಸ್ವಂತಕ್ಕೆ ಬೇಕಾದ ವಸ್ತ್ರಗಳನ್ನು ತರಬೇಕು.
2. ಕಳೆದ ಬಾರಿ ಕೊಟ್ಟ ಪುಸ್ತಕವನ್ನು ತರಬೇಕು.
3. ಮೊಬೈಲ್ ಫೋನ್ ಕಡ್ಡಾಯವಾಗಿ ನಿಷೇಧಿಸಲಾಗಿದೆ. (ವಟುಗಳು ಹೆತ್ತವರೊಂದಿಗೆ ಮಾತಾನಾಡಲು ಬಯಸಿದರೆ ಉಚಿತ ದೂರವಾಣಿ ಇದೆ).
4. ಸಮಾಜ ಬಾಂಧವರು ಜಪ ಹಾಗೂ ಪೂಜಾಕೈಂಕರ್ಯಗಳನ್ನು ಕಲಿಯಲು ಇಚ್ಛಿಸಿದ್ದಲ್ಲಿ (ಸಮಾಜ ಹಾಗೂ ವಯಸ್ಸಿನ ನಿರ್ಬಂಧನೆ)ಗಳಿಲ್ಲದೆ ಕಲಿಸಿಕೊಡುವ ವ್ಯವಸ್ಥೆ ಇದೆ.

ಹೆಚ್ಚಿನ ಮಾಹಿತಿಗಾಗಿ :
ಶ್ರೀ ಕೃಷ್ಣರಾಜ ಭಟ್–9980195355 ; ಶ್ರೀ ಜಯರಾಮ ರಾವ್–9743159540
ಶ್ರೀಮತಿ ವಿಜಯ ದೇವ ರಾವ್–9663001773 ; ಡಾ.ಸುದರ್ಶನ್ ರಾವ್–9845136322
ಶ್ರೀ ಲಕ್ಷ್ಮೀಕಾಂತ ರಾವ್–9448156413 ; ಶ್ರೀ ಎಮ್ .ಕೆ. ದಿವಾಕರ್ ರಾವ್–9902169119
ಶ್ರೀ ಸುಧಾಕರ್ ಬೆಳ್ಳೆ–9845193103

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ, ಹಳೆಯಂಗಡಿ

ತಾರೀಕು : 22–04–2018 ರಿಂದ 06–05–2018ರ ವರೆಗೆ ಪಾವಂಜೆಯಲ್ಲಿ ವಸಂತ ಕಾಲೀನ ವೈದಿಕ ಶಿಕ್ಷಣ ಶಿಬಿರವು ನಡೆಯಲಿದೆ. ಆಸಕ್ತರು ಭಾಗವಹಿಸುವಂತೆ ಅಪೇಕ್ಷೆ.

–ಆಡಳಿತ ಮಂಡಳಿ

॥ ಶ್ರೀ ಸೋಮನಾಥ ಪ್ರಸನ್ನ ॥

## ಶ್ರೀ ಸೋಮನಾಥ ದೇವಸ್ಥಾನ, ಚೆರುಗೋಳಿ

ಮಾನ್ಯರೇ,

ಶ್ರೀ ಜಗದ್ಗುರು ಮಹಾಸನ್ನಿಧಾನಂಗಳವರ ಪರಮಾಶೀರ್ವಾದಗಳಿಂದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಸ್ವಸ್ತಿ। ಶ್ರೀ ಶಾಲಿವಾಹನ ಶಕ ವರ್ಷ 1980 ನೇ ವಿಲಂಬಿ ನಾಮ ಸಂವತ್ಸರದ ವೈಶಾಖ ಶುದ್ಧ ದಶಮಿ ದಿನಾಂಕ 25–04–2018ನೇ ಬುಧವಾರದಂದು

**ಶ್ರೀ ಸೋಮನಾಥ ದೇವರ**

### ವಾರ್ಷಿಕ ಮಹೋತ್ಸವವು

ಸಂಪನ್ನಗೊಳ್ಳಲಿರುವುದು.

ಆ ಪ್ರಯುಕ್ತ ನೆರವೇರವಲಿರುವ ಎಲ್ಲ ದೇವತಾ ಕಾರ್ಯಕ್ರಮಗಳಲ್ಲಿ ಭಕ್ತ ಮಹಾಜನರು ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ, ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಅಧ್ಯಕ್ಷರು ಮತ್ತು ಸರ್ವಸದಸ್ಯರು** ಆಡಳಿತ ಮಂಡಳಿ
**ಅಧ್ಯಕ್ಷರು ಮತ್ತು ಸದಸ್ಯರು** ಸೇವಾ ಸಮಿತಿ
**ಅರ್ಚಕರು**

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4–30ರಿಂದ

**ತಾ.03-05-2018 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.04-05-2018** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ **(ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.20-04-2018 ಮತ್ತು ತಾ.05-05-2018 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಚಿತ್ರಪಟಲದ ಚಿತ್ರಮಾಲಿಕೆ

- ವೈ. ಮೋಹನ ರಾವ್

‘ಚಿತ್ರಪಟಲದ ಚಿತ್ರಮಾಲಿಕೆ’ ಈ ಕೃತಿಯ ‘ತೆರೆಮರೆಯ ರಜನಿಗಂಧ ಎಸ್.ಗೋಪೀಚಂದ ರಾವ್’ದಲ್ಲಿ ಇವರ ಪರಿಚಯಾತ್ಮಕ ಲೇಖನದ ಕೆಲವು ಸಾಲುಗಳು ಹೀಗಿವೆ - ‘‘ಇದೀಗ 85 ತುಂಬಿದ ಎಸ್.ಗೋಪೀಚಂದ ರಾವ್ (ಗೋರಾ) ವೃತ್ತಿಯಲ್ಲಿ ಶಿಕ್ಷಕರು, ಪ್ರವೃತ್ತಿಯಲ್ಲಿ ಸಾಹಿತ್ಯ ಸಂಸ್ಕೃತಿಗಳ ಆರಾಧಾಕರು. ಗುಮಾಸ್ತರಾಗಿ ವೃತ್ತಿ ಜೀವನಕ್ಕೆ ಕಾಲಿಟ್ಟರು. ಶಿಕ್ಷಣ ಕ್ಷೇತ್ರ ಇವರನ್ನು ಕರೆದೊಯ್ಯಿತು. ಜೀವನದುದ್ದ ಶಿಕ್ಷಣ, ಸಮಾಜ, ಸಂಸ್ಕೃತಿ, ಸಾಹಿತ್ಯ ಸೇವೆಗೆಂದೇ ಬದುಕನ್ನು ಮುಡುಪಿಟ್ಟರು. ಉಡುಪಿಯ ಕಡಿಯಾಳಿ-ಕುಂಜಿಬೆಟ್ಟು ಪ್ರದೇಶವೇ ಇವರ ಆಡಂಬೊಲ.

ಕಳೆದ ಶತಮಾನದ ಉತ್ತರಾರ್ಧದ ಅರುಣೋದಯ ಕಾಲದಲ್ಲಿ ಮಾರುತಿ ಗ್ರಂಥಾಲಯ ಮತ್ತು ವಾಚನಾಲಯ, ರಾತ್ರಿ ಶಾಲೆ, ಶಾಲೆಯ ಹಳೆ ವಿದ್ಯಾರ್ಥಿ ಸಂಘ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಯು.ಕಮಲಾ ಬಾಯಿ ಪ್ರೌಢಶಾಲೆಗಳ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಸಕ್ರಿಯ ಕಾರ್ಯಕರ್ತರಾಗಿದ್ದರು. ಸಾಂಸ್ಕೃತಿಕ ಸಂಘಟನೆಗಳಾದ ಕಲಾವೃಂದ ಮತ್ತು ಗೀತಾಭವನಗಳ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಹಿಂದೀ ಪ್ರಚಾರ ಪರಿಷತ್ತನ್ನು ಸ್ಥಾಪಿಸಿ ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಅಧ್ಯಯನಕ್ಕೆ ವೇದಿಕೆ ನಿರ್ಮಿಸಿ, ನೂರಾರು ಭಾಷಾ ಪಂಡಿತರನ್ನು ಸೃಷ್ಟಿಸಿ ಅವರ ವೃತ್ತಿಜೀವನಕ್ಕೆ ದಾರಿಮಾಡಿ ಕೊಟ್ಟವರು ಗೋರಾ’’.

ಈ ಕೃತಿಯ ‘ಸ್ವಗತ’ದಲ್ಲಿ ಎಸ್.ಗೋಪಿಚಂದ ರಾವ್ (ಗೋರಾ) ಇವರು ಹೀಗೆ ಹೇಳುತ್ತಾರೆ- ‘‘ಅನುಭವನಗಳೇ ಬರೆವಣಿಗೆಯ ಬುನಾದಿ. ಅನುಭವಗಳಿಗೆ ಅಲೆದಾಡಬೇಕಿಲ್ಲ. ಬದುಕಿನಲ್ಲಿ ಅವು ಹೇರಳ. ಗ್ರಾಮೀಣ ಪರಿಸರದಲ್ಲಿ ಹುಟ್ಟಿದ, ಕೃಷಿ ಸಂಸ್ಕೃತಿಯಲ್ಲಿ ಬೆಳೆದ ನನಗೆ ಅವುಗಳ ಪರಿಚಯ ಸಾಕಷ್ಟು ದಟ್ಟವಾಗಿಯೇ ಆಗಿದೆ.


ಜನಸಾಮಾನ್ಯರೆನಿಸಿಕೊಂಡವರ ಬದುಕನ್ನು ಕಂಡಾಗ, ಒಂದೊಂದೂ ದಾಖಲಿಸಲು ಯೋಗ್ಯವಾದ ಬಾಳಾಗಿ ನನ್ನ ಮನಸೂರೆಗೊಂಡಿರುತ್ತದೆ. ಅದನ್ನು ದಾಖಲಿಸಬೇಕೆಂಬ ತುಡಿತ ಅತಿಯಾದಾಗ, ಹಲವು ವರ್ಷಗಳ ಹಿಂದೆಯೇ ಬರೆಯಲಾರಂಭಿಸಿದೆ. ಕಾದಂಬರಿ ಬರೆಯುವೆನೆಂದು ಕುಳಿತುಕೊಳ್ಳಲಿಲ್ಲ. ಬಿಡಿ ಲೇಖನಗಳೆಂದು ಬರೆಯಹೊರಟು, ವ್ಯಕ್ತಿ ವ್ಯಕ್ತಿಗಳ ಸಂಬಂಧ, ವೃದ್ಧಿಗೊಳ್ಳುತ್ತ, ಗಾಢವಾಗುತ್ತ ದೀರ್ಘವಾದಾಗ ಕಾದಂಬರಿಯ ರೂಪ ತಾಳಲಾರಂಭಿಸಿದಾಗ ಅದಕ್ಕೆ ಸಜ್ಜಾದೆ, ಬರೆದೆ’’.

ಈ ಕೃತಿಯ ‘ನಲ್ನುಡಿ’ಯಲ್ಲಿ ಡಾ| ಉಪ್ಪಂಗಳ ರಾಮ ಭಟ್ ಅವರು ಹೀಗೆ ತಿಳಿಸುತ್ತಾರೆ- ‘‘ಶ್ರೀಮಾನ್ ಗೋಪಿಚಂದರಾಯರು ಹಳ್ಳಿಯಲ್ಲೇ, ಮಣ್ಣಿನ ಮಗನಾಗಿ ಹುಟ್ಟಿ ಬೆಳೆದು, ಮಣ್ಣನ್ನೇ ಮೆತ್ತಿಕೊಂಡು ಮಣ್ಣಿನವರಿಂದ ಮುತ್ತಿಕೊಂಡಿರುವ ಚಿಂತನಶೀಲ ಅಧ್ಯಾಪಕರು, ಲೇಖಕರು. ಅವರು ನೋಡಿದ, ಬಾಳಿದ, ಬಯಸಿದ, ಬಿಸುಡದ ಹಳ್ಳಿಯ ಜೀವನದ ವಿವಿಧ ಜಾತಿ ವರ್ಗಗಳ ನುಡಿ ಚಿತ್ರವನ್ನು ಬರೆದಿದ್ದಾರೆ (ಚಿತ್ರಮಾಲಿಕೆ).

ಬ್ರಿಟಿಷರು ರಾಜಾಧಿಪತ್ಯದ ಠೇಂಕಾರದ ಜಮೀನ್ದಾರರ ಜಬರ್ದಸ್ತಿನ ಜೀವನದಿಂದ ತೊಡಗಿ ಇಂದಿನ ಪ್ರಜಾಪ್ರಭುತ್ವದ ಹುಳುಕಿನ ರಾಜಕೀಯ ಜೀವನವನ್ನು ಅನುಭವಿಸುತ್ತಿರುವ ಅವರು ಬೆಟ್ಟಂಗೇರಿಯ ಮತ್ತಿತರ ಸುತ್ತಮುತ್ತಲಿನ ಹಳ್ಳಿಯ ಜನಜೀವನವನ್ನು ನುಡಿಚಿತ್ರಗಳಲ್ಲಿ ಬಿಂಬಿಸಿದ್ದಾರೆ. ಆ ಬಗೆಗೆ ಅವರ ಅನುಕಂಪ, ಸಹಾನುಭೂತಿ, ಮೃದು ಆಕ್ರೋಶ ಇಲ್ಲಿ ಮೈದಾಳಿದೆ.

ಹಳ್ಳಿಯ ಬೆಟ್ಟ, ಗುಡ್ಡ, ತೊರೆ, ಪದವು, ಬೈಲು, ಕಾಡು, ಪ್ರಾಣಿಗಳು, ಹುಲ್ಲು ಹಾಸಿದ ತಟ್ಟಿಯೇ ಗೋಡೆಯಾಗಿರುವ ಕಡು ಬಡವರ ಗುಡ್ಡಲುಗಳು, ಬೈಲಿಗಳು, ಕಡಮೆ (ತೊಡಮೆ), ಕೊಳಂಜೆ, ಚಿಕ್ಕುಪಾದೆ, ಕಿದೆ(ಹಟ್ಟಿ), ಕಿದೆಪ್ಪಣೆ (ಬೈಪ್ಪಣೆ) ಮೊದಲಾದುವೆಲ್ಲಾ ಸಂದರ್ಭಾನುಸಾರ ರೂಪತಾಳುತ್ತವೆ’’.

ಪ್ರಕಾಶಕರಾದ ಪ್ರೊ.ಚಿತ್ರಪಾಡಿ ಉಪೇಂದ್ರ ಸೋಮಯಾಜಿಯವರು ಹೀಗೆ ಹೇಳುತ್ತಾರೆ- ‘‘ಬಹುಭಾಷಾ ವಿದ್ವಾಂಸರೂ, ಶಿಕ್ಷಕರೂ, ಲೇಖಕರೂ, ಸಹೃದಯರೂ ಆಗಿರುವ ಶ್ರೀ ಗೋಪಿಚಂದರಾಯರು ತಮ್ಮ ಪರಿಧಿಯೊಳಕ್ಕೆ ಬಂದ ವಿದ್ಯಾರ್ಥಿಗಳನ್ನು ಅವರವರ ಆಸಕ್ತಿಯ ಕ್ಷೇತ್ರದಲ್ಲಿ ತೊಡಗಿಕೊಳ್ಳುವಂತೆ ಮಾಡಿದವರು. ಈಗಾಗಲೇ ಎಂಟು ಕೃತಿಗಳನ್ನು ರಚಿಸಿದ ಅವರು ಇದೀಗ, ಸುಮಾರು ಏಳೆಂಟು ದಶಕಗಳ ಹಿಂದಿನ ಗ್ರಾಮಜೀವನದ ಒಂದು ಪದರನ್ನು ಹೆಕ್ಕಿ ‘ಚಿತ್ರಪಟಲದ ಚಿತ್ರಮಾಲಿಕೆ’ಯ ಮೂಲಕ ಕಟ್ಟಿಕೊಟ್ಟಿದ್ದಾರೆ’’.



ಕೃತಿ : ಚಿತ್ರಪಟಲದ ಚಿತ್ರಮಾಲಿಕೆ (ಗ್ರಾಮ್ಯ ಜೀವನದ ಕಹಿ-ಸಹಿ ನೆನಪುಗಳು) ಲೇಖಕರು : **ಎಸ್.ಗೋಪಿಚಂದ ರಾವ್** ಪ್ರಕಾಶನ : **ಸೋಮಯಾಜಿ ಪ್ರಕಾಶನ, ಚಿತ್ರಪಾಡಿ, ಸಾಲಿಗ್ರಾಮ** ಬೆಲೆ : **ರೂ.150/-**

ಕೆ. ದಾಮೋದರ ಐತಾಳ್, ಸಂಚಾಲಕರು, ಬಳಕೆದಾರರ ವೇದಿಕೆ, ಉಡುಪಿ ಇವರು ‘ಬೆನ್ನುಡಿ’ಯಲ್ಲಿ ಹೀಗೆ ಹೇಳುತ್ತಾರೆ- ‘‘ನನ್ನ ಆತ್ಮೀಯರಲ್ಲೊಬ್ಬರು ಶ್ರೀ ಎಸ್.ಗೋಪಿಚಂದ ರಾವ್ ಅವರು. ಸಾರ್ವಜನಿಕ ಸೇವೆಗೆ ನನ್ನನ್ನು ಸಿದ್ಧಗೊಳಿಸಿದವರು ಅವರೇ. ನಾವು ನಡೆಸುತ್ತಿದ್ದ ವಾಚನಾಲಯ, ಗ್ರಂಥಾಲಯ, ಅದನ್ನು ಬೆಳಸಬೇಕೆಂಬ ಉದ್ದೇಶದಲ್ಲಿ ನಡೆಸಿದ ಎರಡು ದಿನಗಳ ನಾಟಕ ಪ್ರದರ್ಶನ; ಹೌಸ್‌ಫುಲ್-ಕಲೆಕ್ಷನ್ ನಿಲ್ ಆಗಿ ಸಾಲಗಾರರಾಗಿ ಮತ್ತೆ ತೀರಿಸಿದ್ದು-ಇವೆಲ್ಲಾ ಈಗ ಮಧುರ ನೆನಪು ಮಾತ್ರ. ನನ್ನ ಹಿಂದಿ ಅಭ್ಯಾಸವೂ ಅವರಿಂದಾಗಿಯೇ’’.

ಎಸ್.ಗೋಪಿಚಂದ ರಾವ್ ಅವರ ಕೃತಿಯ ಕೆಲವು ಸಾಲುಗಳನ್ನು ನೋಡೋಣ- ಪದ್ದಕ್ಕ ಹಲ್ಲುತಿಕ್ಕಿ ಮುಖ ತೊಳೆದು ತುಳಸಿಗೆ ತಂಬಿಗೆ ನೀರು ಹೊಯ್ದು ಮೂರು ಸುತ್ತು ಬಂದು ನಮಸ್ಕರಿಸಿದಳು. ಅಡಿಗೆ ಮನೆಯಲ್ಲಿ ಒಲೆಯುರಿಸಿ ಎಸರಿಗಿಡುವಷ್ಟರಲ್ಲಿ ಬೈಲಿಗೆ ತೆರಳಿದ್ದ ಸಿಂಧು ಕರೆಯಲ್ಲಿ ಮಿಂದು ಬೆಚ್ಚಗೆ ಬಟ್ಟೆಯುಟ್ಟು ಒದ್ದೆಯಾದುದನ್ನು ಹಿಂಡಿ ತೋಳಿಗೆ ಜೋತು ಹಾಕಿಕೊಂಡು ಮರಳಿಬಂದಳು. ಅದಾಗಲೇ ತಲೆಯೆತ್ತುತ್ತಿದ್ದ ನೇಸರನ ಎಳೆಬಿಸಿಲಲ್ಲಿ ಬಟ್ಟೆಯನ್ನು ರಪ್ಪೆಂದು ಕೊಡಹಿ ನೆರಿಗೆಗಳನ್ನು ಬಿಡಿಸಿ ಅಂಗಳದಲ್ಲಿ ಕಟ್ಟಿದ್ದ ಹಗ್ಗದಲ್ಲಿ ಆರಿಸಿ ಒಳ ಬಂದಳು. ಕೂದಲು ಬಾಚಿಕೊಂಡು, ಹಣೆಗೆ ಬೊಟ್ಟಿಟ್ಟು ಈಗಲೇ ಹೋಗುವುದಾ ಎಂದು ಅಮ್ಮನನ್ನು ಕೇಳಿದಳು. ಪದ್ದಕ್ಕ ಅವಳನ್ನು ಮತ್ತೊಮ್ಮೆ ನೋಡಹತ್ತಿದಳು. ಮಗಳು ಮೈನೆರೆದು ಕೂತಿದ್ದಾಳೆ. ಇನ್ನು ಗಂಡು ಹುಡುಕಬೇಕು. ಎಲ್ಲಿ ಹುಟ್ಟಿದ್ದಾನೋ ಇವಳಿಗೆ ಗಂಡನಾಗುವವನು? ಯಾರು ಹುಡುಕುವುದೋ? ಜಾತಿ ಬಾಂಧವರಿಗೆ ದಮ್ಮಯ್ಯ ಹೊಡೆಯಬೇಕು. ಎಂದು ಮುಂತಾಗಿ ಯೋಚಿಸುತ್ತಿದ್ದಂತೆ ಕಾವೇರಿಯ ನೆನಪಾಯ್ತು...

ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ 1966ರಲ್ಲಿ ನೋಂದಣಿಯಾದಾಗ ಇದ್ದ ಸ್ಥಾಪಕ ಸದಸ್ಯರಲ್ಲಿ ಸಕ್ರಿಯರಾಗಿದ್ದು ಇಂದಿನ ತನಕವೂ ಸಂಘಕ್ಕೆ ಮಾರ್ಗದರ್ಶನ ನೀಡುತ್ತಿರುವ ಸ್ಥಾಪಕ ಸದಸ್ಯರಾದ ಶ್ರೀ ಗೋಪಿಚಂದ ರಾಯರು ಸಂಘದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿದರು. ಅಂದೇ ನಮ್ಮ ಸಂಘವು ವ್ಯವಸ್ಥೆ ಮಾಡಿದ ಪುಸ್ತಕ ಮಳಿಗೆಯಲ್ಲಿ ನನಗೆ ದೊರೆತ ಒಂದು ಅಪೂರ್ವ, ಅಮೂಲ್ಯ ಪುಸ್ತಕ ‘ಚಿತ್ರಪಟಲದ ಚಿತ್ರಮಾಲಿಕೆ’ ಈ ಪುಸ್ತಕದ ಪರಿಚಯವನ್ನು ಮಾಡಲು ನನಗೆ ತುಂಬಾ ಸಂತೋಷವೆನಿಸುತ್ತದೆ. ಸುಮಾರು 86 ವರ್ಷ ತುಂಬಿದ ಎಸ್.ಗೋಪಿಚಂದ ರಾವ್ ಜೀವನದುದ್ದ ಶಿಕ್ಷಣ, ಸಮಾಜ, ಸಂಸ್ಕೃತಿ, ಸಾಹಿತ್ಯ ಸೇವೆಗೆಂದೇ ಬದುಕನ್ನು ಮುಡುಪಿಟ್ಟರು. ಅನುಭವಗಳೇ ಬರವಣಿಗೆಯ ಬುನಾದಿ ಎನ್ನುವ ಅವರ ಮಾತು ಸಹಜವೇ. ಅವರ ಸಾಹಿತ್ಯ ಸೃಷ್ಟಿಯ ಬದುಕಿಗೆ ನನ್ನ ನೂರು ನೂರು ಸಲಾಮುಗಳು.

# ಸಂಗೀತ ಕಾರ್ಯಕ್ರಮ



ಶಾಂತಲಾ ಪ್ರಶಸ್ತಿ ಪುರಸ್ಕೃತ ನಾಟ್ಯಾಚಾರ್ಯ ಶ್ರೀ ಯು.ಎಸ್ ಕೃಷ್ಣರಾಯರಿಂದ 1935 ರಲ್ಲಿ ಸ್ಥಾಪಿಸಲ್ಪಟ್ಟ ಕದ್ರಿ ನೃತ್ಯ ವಿದ್ಯಾನಿಲಯದ ಸಂಗೀತ ಗುರುಗಳಾದ ಶ್ರೀಮತಿ ಪ್ರವೀಣರ ಶಿಷ್ಯೆ ಕುಮಾರಿ ಸಮನ್ವಿತಾ ಜಿ.ಭಟ್ ಇವಳಿಂದ ಕರ್ನಾಟಕ ಶಾಸ್ತ್ರಿಯ ಸಂಗೀತ ಕಛೇರಿಯು ತಾ. 10-02-2018 ರಂದು ಬಂಟ್ಸ್ ಹಾಸ್ಟೆಲ್ ರಸ್ತೆಯಲ್ಲಿರುವ ಸುಜೀರ್ ಸಿ.ವಿ ನಾಯಕ್ ಹಾಲ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ಕುಮಾರಿ ಸಮನ್ವಿತಾಳು ಸುಮಾರು 2 ಗಂಟೆಗಳ ಕಾಲ ಶ್ರೀ ತ್ಯಾಗರಾಜರು, ಶ್ರೀಮುತ್ತುಸ್ವಾಮಿ ದೀಕ್ಷಿತರು ಮುಂತಾದ ವಾಗ್ಗೇಕಾರರ ಕೃತಿಗಳನ್ನು ಸ್ವರಾಲಾಪನೆ, ಸಂಗತಿ, ಸ್ವರ ಪ್ರಸಾರಗಳೊಡನೆ ಸುಶ್ರಾವ್ಯವಾಗಿ ಪ್ರಸ್ತುತ ಪಡಿಸಿದಳು. ಕಾರ್ಯಕ್ರಮದ ಕೊನೆಯಲ್ಲಿ ಈಕೆ ಹಾಡಿದ ದೇವರನಾಮ, ಅಷ್ಟಪದಿ, ಪದಂ, ಭಜನೆ, ದೇಶಭಕ್ತಿಗೀತೆ, ತಿಲ್ಲಾನಗಳಂತಹ ರಚನೆಗಳು ಸಭಿಕರೆಲ್ಲರ ಮೆಚ್ಚುಗೆ ಗಳಿಸಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮಂಗಳೂರು ಉದಯವಾಣಿ ಸುದ್ದಿ ವಿಭಾಗದ ಮುಖ್ಯಸ್ಥರಾದ ಶ್ರೀ ಮನೋಹರ್ ಪ್ರಸಾದ್‌ರವರು ಕಾರ್ಯಕ್ರಮದ ಆರಂಭದಿಂದ ಅಂತ್ಯದವರಗೂ ಕಿಕ್ಕಿರಿದು ಸೇರಿದ ಜನಸ್ತೋಮವನ್ನು ಕಂಡು ಮಂಗಳೂರಿನಲ್ಲಿ ಶಾಸ್ತ್ರೀಯ ಸಂಗೀತಕ್ಕಿರುವ ಪ್ರೋತ್ಸಾಹಕ್ಕಾಗಿ ಜನರನ್ನು ಅಭಿನಂದಿಸಿದರು. ಸಂಗೀತ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ನಟಿ, ಹಿನ್ನಲೆ ಗಾಯಕಿ ಹಾಗೂ ಅಂತರಾಷ್ಟ್ರೀಯ ರೂಪದರ್ಶಿ ಮಿಸ್ ಇಂಡಿಯಾ ಮಿಸ್ ಸೂಪರ್ ಟ್ಯಾಲೆಂಟ್ – 2017 ಆಗಿದ್ದ ಮಿಸ್. ನಿಮಿಕಾ ರತ್ನಾಕರ್ ಇವರು ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ಕುಮಾರಿ ಸಮನ್ವಿತಾಳು ತನ್ನ ಸಂಗೀತ ಗುರುಗಳಾದ ಶ್ರೀಮತಿ ಉಷಾ ಪ್ರವೀಣ್ ಹಾಗೂ ನೃತ್ಯ ಗುರುಗಳಾದ ವಿದ್ವಾನ್ ಶ್ರೀ ಯು.ಕೆ. ಪ್ರವೀಣರಿಗೆ ಗುರುವಂದನ ಸಲ್ಲಿಸಿದಳು. ಕುಮಾರಿ ಸಮನ್ವಿತಾಳ ಮಾತಾಪಿತರಾದ ಶ್ರೀ ಎಚ್. ಗಣೇಶ್ ಭಟ್ ಹಾಗೂ ಶ್ರೀಮತಿ ಶ್ರೀಲತಾ ಜೆ, ಭಟ್‌ರವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀನಿವಾಸ ಕಾಲೇಜಿನ ಉಪನ್ಯಾಸಕಿಯಾಗಿರುವ ಡಾ| ವಿಜಯಲಕ್ಷ್ಮಿ ಎನ್. ನಾಯಕ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಕುಮಾರಿ ಸಮನ್ವಿತಾಳ ಸಂಗೀತ ಕಛೇರಿಗೆ ಮದೃಂಗದಲ್ಲಿ ಮಂಗಳೂರು ಆಕಾಶವಾಣಿಯ ಮೃದಂಗವಾದಕರಾಗಿರುವ ವಿದ್ವಾನ್ ಶ್ರೀ.ಕೆ. ಎಚ್. ರವಿಕುಮಾರ್, ಪಿಟೀಲಿನಲ್ಲಿ ಶ್ರೀ ಶ್ರೀಧರ್ ಆಚಾರ್ ಪಾಡಿಗಾರ್, ತಂಬೂರದಲ್ಲಿ ಶ್ರೀ ದೇವರಾಜ ಆರ್ಯ ಹಾಗೂ ತಬ್ಲಾದಲ್ಲಿ ಶ್ರೀ ಶ್ರೀ ಶ್ರೀಕಾಂತ್ ನಾಯಕ್‌ರವರು ಸಹಕರಿಸಿದರು.

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



ಎಮ್. ದೇವಾನಂದ್ ಭಟ್
Cell : 9845644556
9483913344



**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಕರಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಧಾರ್ಮಿಕ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀ ಶಾರದಾಪೀಠದ ಕೊಡುಗೆ

– ಡಾ।ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು...)

ಶೃಂಗೇರಿ, ಕಾಲಟಿ–ಮೊದಲಾದ ಆಯ್ದ ಕೆಲವು ಪಾಠಶಾಲೆಗಳಲ್ಲಿ ಘನಾಂತ ವೇದಾಧ್ಯಯನಕ್ಕೆ ಮತ್ತು ವೇದಾಂತ, ನ್ಯಾಯ ಹಾಗೂ ವ್ಯಾಕರಣ ಶಾಸ್ತ್ರಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರತಿವರ್ಷವೂ ಅಲ್ಲಲ್ಲಿ ನಡೆಸುವ ವಿದ್ವತ್ಸಭೆಗಳಲ್ಲಿ ಶಾಸ್ತ್ರಪಂಡಿತರು ಭಾಗವಹಿಸಿ, ಬೇರೆ–ಬೇರೆ ಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಸೂಕ್ಷ್ಮ ವಿಚಾರಗಳ ಕುರಿತು ಚರ್ಚೆ ನಡೆಸುವರು.

ಶಾಸ್ತ್ರ ಪಾಂಡಿತ್ಯದಲ್ಲಿ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳವರನ್ನು ಮೀರಿಸುವವರು ಈ ದೇಶದಲ್ಲಿ ಮತ್ತೊಬ್ಬರಿಲ್ಲ ಪ್ರತಿವರ್ಷ ವಿನಾಯಕ ಚತುರ್ಥಿಯಿಂದ ಹನ್ನೆರಡು ದಿನಗಳ ಕಾಲ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ನಡೆಯುವ ‘ಮಹಾಗಣಪತಿ ವಾಕ್ಯಾರ್ಥ ವಿದ್ವತ್‌ಸಭೆ’ಯು ಶಾಸ್ತ್ರಾರ್ಥ ಚರ್ಚೆ ಮತ್ತು ಶಾಸ್ತ್ರ ವಿಚಾರ ವಿನಿಮಯಕ್ಕೆ ಮೀಸಲಾಗಿದ್ದು, ದೇಶಾದ್ಯಂತ ಆಯ್ದ ಶಾಸ್ತ್ರಪಂಡಿತರು ಅದರಲ್ಲಿ ಭಾಗವಹಿಸುತ್ತಾರೆ. ವೇದಾಂತ ಮೀಮಾಂಸಾ, ವ್ಯಾಕರಣ ಅಥವಾ ನ್ಯಾಯ ಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ಇಲ್ಲಿ ಮಂಡಿಸಲಾಗುತ್ತದೆ. ಪ್ರತಿನಿತ್ಯ ನಾಲ್ಕು ಗಂಟೆಗಳ ಕಾಲ ನಡೆಯುವ ಈ ವಿದ್ವತ್ಸಭೆಯಲ್ಲಿ ಜಗದ್ಗುರುಗಳವರು ಉಪಸ್ಥಿತರಿದ್ದು. ಮಾರ್ಗದರ್ಶನ ಮಾಡಿ, ತಮ್ಮ ನಿರ್ಣಯವನ್ನು ಮಂಡಿಸುತ್ತಾರೆ. ಜಗದ್ಗುರು ಶ್ರೀ ಶ್ರೀಭಾರತೀತೀರ್ಥ ಮಹಾಸ್ವಾಮಿಗಳವರು’ ಶಾಸ್ತ್ರಸವರ್ಧಿನೀಸಭಾ’ ಮತ್ತು ‘ಶಾಸ್ತ್ರಪೋಷಕ ಸಭಾ’ಗಳನ್ನು ಸ್ಥಾಪಿಸಿ ಈ ವಿದ್ವತ್ಸಭೆಗೆ ಹೊಸ ಆಯಾಮವನ್ನು ನೀಡಿದ್ದಾರೆ.

ಆದಿಶಂಕರರ ಜನ್ಮಭೂಮಿಯಾದ ಕಾಲಟಿ ಕ್ಷೇತ್ರದಲ್ಲಿ ಪ್ರತಿವರ್ಷವೂ ಇದೇ ಮಾದರಿಯ ಐದು ದಿನಗಳ ಸಭೆಯನ್ನು ನಡೆಸಲಾಗುತ್ತದೆ. ಆಂಧ್ರಪ್ರದೇಶದ ಸಪರಿಕರ ಅದ್ವೈತ ವೇದಾಂತ ಸಭೆಯಲ್ಲಿ ವೇದಾಂತ ಶಾಸ್ತ್ರಕ್ಕೆ ಸಂಬಂಧಿಸಿದ ವಿದ್ವದ್‌ಗೋಷ್ಠಿಗಳನ್ನು ನಡೆಸಲಾಗುತ್ತದೆ.

ತರುಣ ವಿದ್ವಾಂಸರನ್ನು ಶಾಸ್ತ್ರಾಧ್ಯಯನದಲ್ಲಿ ಪ್ರೋತ್ಸಾಹಿಸಲು ಅವರಿಗೆ ವಿದ್ಯಾರ್ಥಿವೇತನ ನೀಡಿ. ಆಗಾಗ ಪರೀಕ್ಷೆಗಳನ್ನು ನಡೆಸಲಾಗುವುದು ಮಹಾಗಣಪತಿ ವಾಕ್ಯಾರ್ಥ ವಿದ್ವತ್ ಸಭೆ’ಯ ಸಂದರ್ಭದಲ್ಲಿ ಜಗದ್ಗುರುಗಳವರು ಅಂತಿಮ ಪರೀಕ್ಷೆಯನ್ನು ನಡೆಸಿ, ಉತ್ತೀರ್ಣರಾದವರಿಗೆ ‘ವಿದ್ವತ್‌ಪ್ರವರ’ ಎಂಬ ಬಿರುದನ್ನು ನೀಡಿ ಗೌರವಿಸುವರು. ಇದರಿಂದಾಗಿ ಪ್ರತಿಷ್ಠಿತ ಮಹಾಗಣಪತಿ ವಾಕ್ಯಾರ್ಥವಿದ್ವತ್ಸಭೆಯಲ್ಲಿ ಭಾಗವಹಿಸುವವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಶೃಂಗೇರಿ ಶ್ರೀಶಾರದಾಪೀಠದ ವಿದ್ವತ್‌ಸಭೆಯಲ್ಲಿ ಭಾಗವಹಿಸಿ ಜಗದ್ಗುರುಗಳವರಿಂದ ಆಶೀರ್ವಾದ ಪಡೆಯುವುದು ತಮ್ಮ ಪೂರ್ವಜನ್ಮದ ಸುಕೃತ ವಿಶೇಷವೆಂದು ಅನೇಕ ಮಂದಿ ಭಾವಿಸುತ್ತಾರೆ ಏಕೆಂದರೆ ಈ ದೇಶದ ಬೇರೆಲ್ಲೂ ಶೃಂಗೇರಿ ಶ್ರೀಮಠದ ವಾಕ್ಯಾರ್ಥಸಭೆಯ ಗುಣಮಟ್ಟದ ಸಭೆಗಳು ನಡೆಯುತ್ತಿಲ್ಲವೆಂಬುದು ಸನಾತನ ಧರ್ಮಾಭಿಮಾನಿಗಳಿಗೆಲ್ಲ ಹೆಮ್ಮೆಯ ವಿಷಯವಾಗಿದೆ. ಶ್ರೀಗಳವರ ಐವತ್ತನೇ ವರ್ಧಂತ್ಯುತ್ಸವದಿಂದ ಮೊದಲ್ಗೊಂಡು ಪ್ರತಿವರ್ಷವೂ ಶ್ರೇಷ್ಠ ವಿದ್ವಾಂಸರೊಬ್ಬರಿಗೆ ಅಥವಾ ವೇದಶಾಸ್ತ್ರಗಳ ಪ್ರಚಾರವನ್ನು ಮಾಡುತ್ತಿರುವ ಸಂಸ್ಥೆಗೆ ಒಂದು ಲಕ್ಷ ರೂಪಾಯಿ ಮೊತ್ತದ ‘ಶಾರದಾಪೀಠ ಪುರಸ್ಕಾರ’ವನ್ನು ನೀಡಲಾಗುತ್ತಿದೆ.

ಸಂಸ್ಕೃತದ ರಕ್ಷಣೆ ಮತ್ತು ಪೋಷಣೆ ಕುರಿತು ಶ್ರೀಮಠವು ವಿಶೇಷ ಆಸಕ್ತಿಯನ್ನು ವಹಿಸಿದೆ. ಶ್ರೀಮಠದಿಂದ ನಿರ್ವಹಿಸಲ್ಪಡುವ ಎಲ್ಲ ಪಾಠಶಾಲೆಗಳಲ್ಲಿ ಸಂಸ್ಕೃತ ಶಿಕ್ಷಣ ಕುರಿತು ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಶೃಂಗೇರಿಯ ಸದ್ವಿದ್ಯಾಸಂಜೀವಿನೀ ಪಾಠಶಾಲೆಯಲ್ಲಿ ಶಾಸ್ತ್ರಾಧ್ಯಯನಕ್ಕೆ ಪೂರ್ವಭಾವಿಯಾಗಿ ನಾಲ್ಕು ವರ್ಷಗಳ ಅವಧಿಯ ಸಂಸ್ಕೃತ ಸಾಹಿತ್ಯ ಶಿಕ್ಷಣವನ್ನು ನೀಡಲಾಗುವುದು.

ಜಗದ್ಗುರು ಶ್ರೀಮದಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು ಜನಸಾಮಾನ್ಯರಿಗೆ ಸಂಸ್ಕೃತ ಶಿಕ್ಷಣ ನೀಡುವ ಉದ್ದೇಶದಿಂದ 1969ರಲ್ಲಿ ‘ಸುರಸರಸ್ವತೀ ಸಭಾ’ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಭೆಯು ತಮ್ಮ ಆರಂಭದ ವರ್ಷದಿಂದಲೂ ವರ್ಷಕ್ಕೆ ಎರಡು ಬಾರಿ ಸರಳ ಸಂಸ್ಕೃತ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ. ಬೆಂಗಳೂರಿನಲ್ಲಿ ಕಾರ್ಯಾಲಯವನ್ನು ಹೊಂದಿರುವ ಈ ಸಂಸ್ಕೃತ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ. ಬೆಂಗಳೂರಿನಲ್ಲಿ ಕಾರ್ಯಾಲಯ ವನ್ನು ಹೊಂದಿರುವ ಈ ಸಂಸ್ಥೆಯು ಪ್ರಥಮಾ, ದ್ವಿತೀಯ, ತೃತೀಯಾ, ತುರೀಯಾ ಮತ್ತು ಪ್ರವೇಶ ಎಂಬ ಐದು ಪರೀಕ್ಷೆಗಳನ್ನು ನಡೆಸುತ್ತಿದೆ. ಈ ಐದು ಪರೀಕ್ಷೆಗಳನ್ನು ಮುಗಿಸುವ ಹೊತ್ತಿಗೆ ವಿದ್ಯಾರ್ಥಿಯು ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಪರಿಚಯವನ್ನು ಹೊಂದಿ, ಬರೆಯಲು ಮತ್ತು ಸಂಭಾಷಣೆ ನಡೆಸಲು ಸಮರ್ಥನಾಗುತ್ತಾನೆ. ಇದುವರೆಗೆ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಮಂದಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅರ್ಹತಾ ಪತ್ರಗಳನ್ನು ಪಡೆದಿದ್ದಾರೆ. ಮನೆಯಲ್ಲೇ ಕುಳಿತು ಅಧ್ಯಯನ ಮಾಡಲು ಅನುಕೂಲವಾಗುವಂತೆ ಸಭಾವು ವೆಬ್‌ಸೈಟ್ ನಿರ್ಮಿಸಿದ್ದು, ಆನ್‌ಲೈನ್ ಪರೀಕ್ಷೆಗಳಿಗೆ ಅನುಕೂಲ ಕಲ್ಪಿಸಿದೆ ಸಭಾವು ಭಾರತದ ಅನೇಕ ಭಾಗಗಳಲ್ಲಿ ಮತ್ತು ಅಮೇರಿಕಾ ಹಾಗೂ ಆಸ್ಟ್ರೇಲಿಯಾ ದೇಶಗಳಲ್ಲೂ ಪರೀಕ್ಷಾ ಕೇಂದ್ರಗಳನ್ನು ಹೊಂದಿದೆ. ಜಾತಿ–ಮತ–ವಯಸ್ಸು–ಲಿಂಗಬೇಧವಿಲ್ಲದೆ ಯಾರು ಬೇಕಾದರೂ ಈ ಪರೀಕ್ಷೆಗಳಲ್ಲಿ ಭಾಗವಹಿಸಬಹುದಾಗಿದೆ.

ಶೃಂಗೇರಿ ಶ್ರೀಶಾರದಾಪೀಠದಲ್ಲಿನ ಪ್ರಾಚೀನ ಕಾಲದ ಅನೇಕ ಹಸ್ತಪ್ರತಿಗಳು, ಕಡತಗಳು, ಚಾರಿತ್ರಿಕ ದಾಖಲೆಗಳು, ಮುದ್ರಣಗೊಳ್ಳದ ಪುಸ್ತಕಗಳು–ಇವೆಲ್ಲ ಈ ಹಿಂದೆ ‘ಸರಸ್ವತೀಪುಸ್ತಕಭಂಡಾರ’ದಲ್ಲಿದ್ದುವು ಅವುಗಳ ಸಂರಕ್ಷಣೆ ಮತ್ತು ಪ್ರಕಟಣೆಗೆ ಜಗದ್ಗುರು ಶ್ರೀಭಾರತೀತೀಥಮಹಾಸ್ವಾಮಿಗಳವರು 2001ರಲ್ಲಿ ನಿಸರ್ಗರಮಣೀಯವಾದ ನರಸಿಂಹವನದಲ್ಲಿ ‘ಶ್ರೀ ಶಂಕರ ಅದ್ವೈತಶೋಧಕೇಂದ್ರ’ವನ್ನು ಸ್ಥಾಪಿಸಿದರು. ಈ ಶೋಧ ಕೇಂದ್ರ ಇದುವರೆಗೆ ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ. 2005 ರಿಂದ ಪ್ರತಿವರ್ಷವೂ ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆಯ ಕಲಾಪಗಳನ್ನು ‘ವಿದ್ವತ್ ಪ್ರತಿಭಾ’ ಎಂಬ ಹೆಸರಿನಿಂದ ಪ್ರಕಟಿಸುತ್ತಿದೆ. ಸದ್ವಿದ್ಯಾಸಂಜೀವಿನೀ ಪಾಠಶಾಲೆಯ ‘ಸದ್ವಿದ್ಯಾ’ ಎಂಬ ವಾರ್ಷಿಕ ಸಂಚಿಕೆ ಪ್ರಕಟವಾಗುವುದೂ ಇಲ್ಲಿಯೇ, ಇಲ್ಲಿನ ‘ಡಿಜಿಟಲ್ ಲೈಬ್ರರಿ’ಯ ಮೂಲಕ ಪ್ರಪಂಚದ ಯಾವ ಮೂಲೆಯಲ್ಲಿ ಬೇಕಾದರೂ ಕುಳಿತು ಅದ್ವೈತಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಬಹುದು ಹಸ್ತಪ್ರತಿಗಳ ಸಂರಕ್ಷಣೆಗೆ ಬಹಳ ಉತ್ತಮವಾದ ವ್ಯವಸ್ಥೆ ಇದ್ದು ಸಾರ್ವಜನಿಕರಿಂದಲೂ ಹಸ್ತಪ್ರತಿಗಳನ್ನು ಕೊಡುಗೆಯ ರೂಪದಲ್ಲಿ ಸ್ವೀಕರಿಸಲಾಗುತ್ತಿದೆ. ಕೇಂದ್ರವು ಶ್ರೀಮಠದಲ್ಲಿ ನಡೆಯುವ ಪ್ರಮುಖ ಕಾರ್ಯಕ್ರಮಗಳನ್ನು ದೃಕ್‌ಶ್ರವಣ ಮಾಧ್ಯಮಗಳಲ್ಲಿ ಚಿತ್ರೀಕರಿಸಿ, ಅಂತರ್ಜಾಲಕ್ಕೆ ಸೇರಿಸುತ್ತದೆ. ಶ್ರೀಮಠದ ವೆಬ್‌ಸೈಟ್ ನಿರ್ವಹಣೆ, ಪ್ರಕಟವಾಗುವ ಗ್ರಂಥಗಳು ಮತ್ತು ಸ್ಮರಣ ಸಂಚಿಕೆಗಳ ವಿನ್ಯಾಸ ಮತ್ತು ಮುದ್ರಣ ಪೂರ್ವಕಾರ್ಯಗಳು – ಇವೆಲ್ಲ ಈ ಕೇಂದ್ರವೇ ನಿರ್ವಹಿಸುತ್ತಿದೆ.

‘ಅದ್ವೈತ ಶಾರದಾ ಪ್ರಾಜೆಕ್ಟ್’ ಮೂಲಕ ಈ ಶೋಧ ಕೇಂದ್ರವು ತನ್ನ ಸಹಸ್ರಾರು ತಾಳೆಗರಿ ಗ್ರಂಥಗಳನ್ನು ರಕ್ಷಿಸುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಗೆದ್ದಲು ಹಿಡಿದಿದ್ದ ತಾಲಪತ್ರಗಳನ್ನು ‘ಧೂಪನಕ್ರಿಯೆ’ (ಫ್ಯೂಮಿಗೇಶನ್) ಮಾಡಿ, ಹಾಳೆಗಳನ್ನು ಸ್ವಚ್ಛಗೊಳಿಸಿ, ಸ್ಪಿರಿಟ್ ಹಾಗೂ ಸಿಟ್ರೋನಿಲ್ಲಾದಿಂದ ಸಂರಕ್ಷಿಸಿ ಕಾಪಾಡುವುದು ಈ ಯೋಜನೆಯ ಮೊದಲ ಹಂತದ ಕಾರ್ಯ. ನಂತರ ಅತ್ಯುತ್ತಮ ಸ್ಕ್ಯಾನರ್ ಬಳಸಿ ಈ ಎಲ್ಲ ಗ್ರಂಥಗಳನ್ನು ದಿಜಿಟೈಸ್ ಮಾಡಲಾಗುತ್ತದೆ. ಈ ಎಲ್ಲ ಮಾಹಿತಿಗಳನ್ನು ಅಂತರ್ಜಾಲಕ್ಕೆ ಸೇರಿಸಿಬಿಟ್ಟರೆ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ವ್ಯವಧಾನದಿಂದ ಕುಳಿತು ಈ ಗ್ರಂಥಗಳನ್ನು ಅಭ್ಯಾಸ ಮಾಡಬಹುದು.

ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಶಂಕರ ಭಗವತ್ಪಾದ ಜನ್ಮಭೂಮಿಯಾದ ಕಾಲಟಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಲ್ಲಿ ಪ್ರಧಾನಪಾತ್ರ ವಹಿಸಿದ್ದಾರೆ. ಶೃಂಗೇರಿಯಲ್ಲಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠದ ಸ್ಥಾಪನೆಗೂ ಅವರೇ ಕಾರಣೀಕರ್ತರು,

**ಧರ್ಮಸಂರಕ್ಷಣೆ**

ಧರ್ಮಸಂರಕ್ಷಣೆ ಮತ್ತು ವಿಶ್ವಶಾಂತಿಗಾಗಿ ಶೃಂಗೇರಿ ಧರ್ಮಸಂಸ್ಥಾನವು ಅನೇಕ ಯಜ್ಞ ಯಾಗಾದಿಗಳನ್ನು ನಡೆಸಿಕೊಂಡು ಬರುತ್ತಿದೆ. ಅತಿರುದ್ರಮಹಾಯಾಗ, ಮಹಾರುದ್ರಯಾಗ, ಸಹಸ್ರಚಂಡೀಮಹಾಯಾಗ, ಶತಚಂಡೀ ಮಹಾಯಾಗ–ಮೊದಲಾದ ಯಾಗಗಳಲ್ಲಿ ಸಾವಿರಾರು ಮಂದಿ ಋತ್ವಿಜರು ಭಾಗವಹಿಸುತ್ತಾರೆ. 2011ರಲ್ಲಿ ಜಗದ್ಗುರು ಶ್ರೀಭಾರತೀರ್ಥ ಮಹಾಸ್ವಾಮಿಗಳವರ ಅರವತ್ತೊಂದನೆಯ ವರ್ಧಂತ್ಯುತ್ಸವದ ಅಂಗವಾಗಿ ಮನುಕುಲದ ಅಭ್ಯುದಯಕ್ಕಾಗಿ ನಡೆಸಿದ ಅಯುತ ಚಂಡೀಮಹಾಯಾಗವು ಅಪೂರ್ವವಾದುದು. ಆರು ದಿನಗಳ ಕಾಲ ನಡೆದ ಈ ಯಾಗದಲ್ಲಿ ದೇಶಾದ್ಯಂತದ 1200ಕ್ಕೂ ಹೆಚ್ಚು ಋತ್ವಿಜರು ಭಾಗವಹಿಸಿದ್ದರು. ಕೋಟಿಕುಂಕುಮಾರ್ಚನೆ, ಲಕ್ಷಮೋದಕ ಹೋಮ, ಚತುರ್ವೇದಪಾರಾಯಣ–ಇತ್ಯಾದಿಗಳು ಆಗಾಗ ನಡೆಯುತ್ತಲೇ ಇರುತ್ತವೆ.

ಶೃಂಗೇರಿ ಶ್ರೀಶಾರದಾಪೀಠದಲ್ಲಿ ಶಾಸ್ತ್ರೋಕ್ತವಾದ ಎಲ್ಲ ಧಾರ್ಮಿಕ ಹಬ್ಬ–ಹರಿದಿನಗಳನ್ನು ವ್ರತೋಪಾಸನೆಗಳನ್ನು ಆಚರಿಸಲಾಗುತ್ತಿದೆ. ಪ್ರಾಚೀನ ದೇವಾಲಯಗಳ ಸಂರಕ್ಷಣೆ ಮತ್ತು ಶಿಥಿಲವಾದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಆದ್ಯತೆ ನೀಡಲಾಗುತ್ತಿದೆ. ಇಂತಹ ದೇವಾಲಯಗಳಲ್ಲಿ ಜಗದ್ಗುರು ಮಹಾಸ್ವಾಮಿಗಳವರ ದಿವ್ಯಹಸ್ತದಿಂದ ಪುನಃಪ್ರತಿಷ್ಠೆ, ಕುಂಭಾಭಿಷೇಕಾದಿಗಳು ನಡೆಯುತ್ತವೆ. ಶ್ರೀಮಠದ ಶಿಷ್ಯ ಸಮುದಾಯದವರು ನಡೆಸಲು ಬಯಸುವ ಧಾರ್ಮಿಕ ಕಾರ್ಯಗಳಿಗೆ ಶೃಂಗೇರಿಯಲ್ಲಿ ಮತ್ತು ದೇಶಾದ್ಯಂತ ವ್ಯಾಪಿಸಿರುವ ಶೃಂಗೇರಿ ಶಂಕರಮಠಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಶ್ರೀಮಠವು ದೇಶದ ಉದ್ದಗಲಗಳಲ್ಲಿ 180ಕ್ಕೂ ಹೆಚ್ಚು ಶಾಖಾಮಠಗಳನ್ನು ಹೊಂದಿದೆ. ಅವುಗಳನ್ನು ‘ಶೃಂಗೇರಿ ಶಂಕರಮಠ’ಗಳೆಂದು ಕರೆಯಲಾಗುತ್ತದೆ ಸಾಮಾನ್ಯವಾಗಿ ಜಗದ್ಗುರುಗಳ ವಿಜಯ ಯಾತ್ರೆ ಸಂದರ್ಭದಲ್ಲಿ ಇವುಗಳನ್ನು ಸ್ಥಾಪಿಸಲಾಗುತ್ತದೆ. ವಾರಾಣಾಸಿ, ನಾಸಿಕ ಮೊದಲಾದ ಕಡೆ ಇರುವ ಶಂಕರಮಠಗಳು ನೂರಾರು ವರ್ಷಗಳಷ್ಟು ಹಿಂದಿನವು. ಬೆಂಗಳೂರು, ಹೈದ್ರಾಬಾದು, ಚೆನ್ನೈ, ಡೆಲ್ಲಿ, ಮುಂಬೈ, ಕೊಲ್ಲತ್ತಾ–ಮೊದಲಾದ ಮಹಾನಗರಗಳಲ್ಲಿ ಇರುವ ಶಂಕರಮಠಗಳು ಸಾವಿರಾರು ಮಂದಿ ಭಕ್ತರಿಗೆ ಸೇವೆ ಒದಗಿಸುತ್ತಿವೆ. ಕೆಲವು ಕಡೆ ಅತಿಥಿಗೃಹಗಳು, ಕಲ್ಯಾಣಮಂಟಪ, ಸಭಾಗೃಹ, ಯಾಗಶಾಲೆ, ಶ್ರಾದ್ಧಗೃಹ, ಪ್ರವಚನಮಂದಿರ, ಪಾಠಶಾಲೆ, ಗ್ರಂಥಾಲಯ–ಮೊದಲಾದ ಸೌಕರ್ಯಗಳನ್ನು ಒದಗಿಸುತ್ತಿವೆ. ಹೆಚ್ಚಿನ ಸಂಖ್ಯೆಯ ಶಂಕರಮಠಗಳು ಸಣ್ಣನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿವೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಮಹಾರಾಷ್ಟ್ರ, ಪಶ್ಚಿಮಬಂಗಾಳ, ಉತ್ತರಪ್ರದೇಶ, ಉತ್ತರಾಂಚಲ, ಡೆಲ್ಲಿ ಹರ್ಯಾನ, ತ್ರಿಪುರ, ಹಿಮಾಚಲ ಪ್ರದೇಶ, ಜಾಖಂಡ–ಮೊದಲಾದ ರಾಜ್ಯಗಳಲ್ಲಿ ಶೃಂಗೇರಿ ಶಂಕರಮಠಗಳಿವೆ.

ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಶ್ರೀಶಾರದಾಪೀಠವು ಸನಾತನ ಧರ್ಮವನ್ನು ಸಾಗರೋತ್ತರ ದೇಶಗಳಲ್ಲಿ ಪಸರಿಸುವ ಮಹತ್ಕಾರ್ಯದ ಅಂಗವಾಗಿ ಅಮೇರಿಕಾದ ನ್ಯೂಜೆರ್ಸಿ ಎಂಬಲ್ಲಿ ‘ಶೃಂಗೇರಿ ವಿದ್ಯಾಭಾರತೀ’ ಪ್ರತಿಷ್ಠಾನವನ್ನು ಸ್ಥಾಪಿಸಿತು. ಇದೀಗ ಅಲ್ಲಿನ ಸ್ಟ್ರೌಡ್ಸ್‌ಬರ್ಗ್ ಎಂಬಲ್ಲಿ ಜಗನ್ಮಾತೆ ಶಾರದಾಂಬೆಯ ಸುಂದರವಾದ ಶಿಲಾಮಯ ದೇವಸ್ಥಾನ ನಿರ್ಮಾಣಗೊಂಡಿದೆ. ಇಲ್ಲಿ ಎರಡು ಅತಿರುದ್ರ ಮಹಾಯಾಗ ಮತ್ತು ಶತಚಂಡೀ ಮಹಾಯಾಗಗಳು ನಡೆದಿವೆ. ಪ್ರತಿವರ್ಷ ಮಹಾರುದ್ರಯಾಗ ಮತ್ತು ಗಾಯತ್ರೀ ಜಪ–ಹೋಮಗಳನ್ನು ನಡೆಸಲಾಗುತ್ತದೆ. 2005ರಲ್ಲಿ ಕೆನಡಾದ ಟೊರೆಂಟೋ ಎಂಬಲ್ಲಿ ಇಂತಹುದೇ ಒಂದು ಪ್ರತಿಷ್ಠಾನವನ್ನು ಆರಂಭಿಸಲಾಯಿತು. ಅಮೇರಿಕಾ ಮತ್ತು ಕೆನಡಾದ ಈ ಕೇಂದ್ರಗಳಲ್ಲಿ ದೇವಸ್ಥಾನಗಳ ಜತೆಗೆ ವಿಶಾಲವಾದ ಪುಸ್ತಕ ಭಂಡಾರ, ಅತಿಥಿಗೃಹ, ಗೋಶಾಲೆ, ಸಂದರ್ಶಕರಿಗೆ ಅನ್ನಸಂತರ್ಪಣೆ, ಶ್ರಾದ್ಧಾದಿಗಳನ್ನು ಮಾಡಲು ಬೇಕಾದ ಅನುಕೂಲಗಳು– ಇವೆಲ್ಲ ಲಭ್ಯವಿವೆ. ಇದೀಗ ಅಮೇರಿಕಾದ ಹ್ಯೂಸ್ಟನ್, ಡೆಟ್ರಾಯಿಟ್ ಮತ್ತು ಸ್ಯಾನ್‌ಡಿಗೋ ಎಂಬಲ್ಲಿ ಇಂತಹುದೇ ದೇವಾಲಯಸಮುಚ್ಚಯವನ್ನು ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿವೆ. ಅಲ್ಲಿಗೆ ಶಂಕರ ಭಗವತ್ಪಾದರು ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದಂತೆ ಅಮೇರಿಕಾದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಶಾರದಾಪೀಠಗಳನ್ನು ಸ್ಥಾಪಿಸಿದಂತಾಗುತ್ತದೆ.

ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಐವತ್ತಾರನೇ ವರ್ಧಂತ್ಯುತ್ಸವದ ಸಂದರ್ಭದಲ್ಲಿ ‘ಗೀತಾಜ್ಞಾನ ಯಜ್ಞ’ವನ್ನು ಆರಂಭಿಸಲಾಯಿತು. ಇದರ ಅಡಿಯಲ್ಲಿ ಜಾತಿ–ಲಿಂಗ–ವಯೋಮಾನಗಳ ಭೇದವಿಲ್ಲದೆ ಆಸಕ್ತರು ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ ಕಂಠಪಾಠವನ್ನು ಒಪ್ಪಿಸಿ, ಇಪ್ಪತ್ತೊಂದು ಸಾವಿರ ರೂಪಾಯಿಗಳ ನಗದು ಬಹುಮಾನವನ್ನು ಪಡೆಯಬಹುದು. ಒಂದರಿಂದ ಆರು, ಏಳರಿಂದ ಹನ್ನೆರಡು ಅಥವಾ ಹದಿಮೂರರಿಂದ ಹದಿನೆಂಟು ಅಧ್ಯಾಯಗಳನ್ನು ಕಂಠಪಾಠ ಮಾಡಿ, ಪರೀಕ್ಷಕರ ಮುಂದೆ ತಪ್ಪಿಲ್ಲದೆ ಒಪ್ಪಿಸಿದಾಗ ಅವರು 5000 ರೂ.ಗಳ ಬಹುಮಾನ ಪಡೆಯಲು ಅರ್ಹರಾಗುತ್ತಾರೆ. ಪರೀಕ್ಷೆಯಲ್ಲಿ ಜಯಶೀಲರಾದ ಅಭ್ಯರ್ಥಿಗಳನ್ನು ಸ್ವತಹ ಜಗದ್ಗುರುಗಳವರೇ ಮತ್ತೊಮ್ಮೆ ಪರೀಕ್ಷಿಸಿ ಆಶೀರ್ವದಿಸುತ್ತಾರೆ. ‘ಜಗನ್ಮಾತೆ ಶಾರದಾಂಬೆಯ ಅನುಗ್ರಹವು ಅವರನ್ನು ಸನ್ಮಾರ್ಗದಲ್ಲಿ ನಡೆಸಲಿ’–ಎಂದು ಹಾರೈಸಿ, ಫಲ ಮಂತ್ರಾಕ್ಷತೆ ಮತ್ತು ಪ್ರಶಸ್ತಿ ಪತ್ರಗಳನ್ನು ಅನುಗ್ರಹಿಸುತ್ತಾರೆ. ಈ ಜ್ಞಾನಯಜ್ಞವು ಆರಂಭವಾದಂದಿನಿಂದ ಇಂದಿನ ವರೆಗೆ ಬೇರೆ–ಬೇರೆ ರಾಜ್ಯಗಳ 3200ಕ್ಕೂ ಹೆಚ್ಚು

ಮಂದಿ ಭಾಗವಹಿಸಿ, ಬಹುಮಾನ ಗಳಿಸಿದ್ದಾರೆ. ಈ ಯಜ್ಞದಲ್ಲಿ ಭಾಗವಹಿಸಲು ಬಯಸುವವರು ಮುಂಚಿತವಾಗಿ ಶ್ರೀ ಮಠದ ಕಛೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಪ್ರತೀ ಭಾನುವಾರ ಮಧ್ಯಾಹ್ನ ನಂತರ ಶೃಂಗೇರಿಯ ನರಸಿಂಹ ವನದಲ್ಲಿ ಪರೀಕ್ಷೆ ನಡೆಯುತ್ತದೆ.

ಶ್ರೀಮಠವು ಆರಂಭಿಸಿರುವ ಭಗವನ್ನಾಮಯಜ್ಞವು ಭಗವಂತನ ಪವಿತ್ರನಾಮಗಳನ್ನು (ರಾಮ ಮತ್ತು ಶಿವ) ಬರೆಯಲು ಪ್ರೋತ್ಸಾಹಿಸುತ್ತದೆ. ಭಗವನ್ನಾಮವನ್ನು ಬರೆಯಲು ಬೇಕಾದ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುವುದು ಯಾರು ಪುಸ್ತಕದ ತುಂಬ ಬರೆದು ಸಮರ್ಪಿಸುತ್ತಾರೋ ಅವರು ಜಗದ್ಗುರುಗಳವರ ಆಶೀರ್ವಚನ ಮತ್ತು ವಿಶೇಷ ಬಹುಮಾನಕ್ಕೆ ಭಾಜನರಾಗುತ್ತಾರೆ.

ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ಶೃಂಗೇರಿಯಲ್ಲಿ ಸುಬ್ರಹ್ಮಣ್ಯ ಸ್ವಾಮಿ, ಶ್ರೀಶಂಕರಾಚಾರ್ಯ ಮತ್ತು ತೋರಣ ಗಣಪತಿಯ ಶಿಲಾಮಯ ದೇವಸ್ಥಾನಗಳು, ಅವರ ವಿದ್ಯಾ ಗುರುಗಳ ಅಧಿಷ್ಠಾನ ಮಂದಿರ, ವಿದ್ಯಾತೀರ್ಥಸೇತು, ಸುಮಾರು 127 ಅಡಿ ಎತ್ತರದ ನಯನ ಮನೋಹರವಾದ ರಾಜ ಗೋಪುರ, ಶಾರದಾಂಬೆಯ ಸುವರ್ಣ ವಿಮಾನ ಗೋಪುರ, ಶಾರದಾ ಕೃಪಾ–ಯಾತ್ರೀ ನಿವಾಸ ಮೊದಲಾದ ಅತಿಥಿ ಗೃಹಗಳು, ಗುರುನಿವಾಸ ಭಾರತೀತೀರ್ಥಪ್ರಸಾದ, ಕಲ್ಯಾಣಮಂಟಪ, ವೃದ್ಧಾಶ್ರಮ, ಸದ್ವಿದ್ಯಾಸಂಜೀವಿನೀಪಾಠಶಾಲೆಯ ಶತಮಾನೋತ್ಸವ ಭವನ, ಪಾರಂಪರಿಕ ಭವನ, ವೇದವ್ಯಾಸ ಮಂದಿರ–ಮೊದಲಾದ ಭವ್ಯವಾದ ಕಟ್ಟಡಗಳ ನಿರ್ಮಾಣ ಕಾರ್ಯ ನಡೆದಿದೆ. ಶಂಕರ ಜಯಂತಿಯ ಮರುದಿನ ಶ್ರೀಶಂಕರಾಚಾರ್ಯ ರಥೋತ್ಸವಕ್ಕೆ ವ್ಯವಸ್ಥೆ ಮಾಡಲಾಗಿದೆ.

ಜಗದ್ಗುರುಗಳವರ ಆಶಯದಂತೆ ಸರಕಾರವು ಶಂಕರ ಜಯಂತಿಯ ದಿನವನ್ನು 'ತತ್ತ್ವಜ್ಞಾನಿಗಳ ದಿನ'ವೆಂದು ಘೋಷಿಸಿದೆ. ಇದೀಗ ಸುಮಾರು 20 ಕೋಟಿ ವೆಚ್ಚದಲ್ಲಿ 32 ಅಡಿ ಎತ್ತರದ (ಪೀಠ ಸೇರಿ 70 ಅಡಿ) ಶಂಕರಾಚಾರ್ಯರ ಸುಂದರ ವಿಗ್ರಹವನ್ನೊಳಗೊಂಡ 'ಆದಿಶಂಕರ ಪರ್ವತ'ವು ನಿರ್ಮಾಣಗೊಳ್ಳುತ್ತಿದೆ.

ಶ್ರೀಮಠವು ವೇದ–ಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳ ಪ್ರಕಟಣೆಯನ್ನು ಪ್ರೋತ್ಸಾಹಿಸುತ್ತಿದೆ. ವೇದಾಂತ ನ್ಯಾಯ, ಮೀಮಾಂಸಾ, ತರ್ಕ, ಜ್ಯೋತಿಷ, ತಂತ್ರಶಾಸ್ತ್ರ, ಮಂತಶಾಸ್ತ್ರ ಮತ್ತು ಆಯುರ್ವೇದಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು ಪ್ರಕಟವಾಗಿದೆ. ಜಗದ್ಗುರುಗಳ ಆಶೀರ್ವಾದ ದೊಂದಿಗೆ ತತ್ತ್ವಾಲೋಕ (ಇಂಗ್ಲೀಷ್ ಮತ್ತು ಹಿಂದಿ). ಶಂಕರಕೃಪಾ (ಕನ್ನಡ ಮತ್ತು ತೆಲುಗು) ಅಮ್ಮನ್ ದರ್ಶನಂ (ತಮಿಳು)–ಮೊದಲಾದ ಪತ್ರಿಕೆಗಳು ಪ್ರಕಟವಾಗುತ್ತಿವೆ. ಜಗದ್ಗುರುಗಳವರ ಅನುಜ್ಞೆಯಂತೆ ಶ್ರೀಮಠದ ಶಿಷ್ಯರ ಅನುಕೂಲಕ್ಕಾಗಿ ಪ್ರತಿವರ್ಷವೂ ಶ್ರೀಮಠೀಯ ಪಂಚಾಂಗವನ್ನು ಪ್ರಕಟಿಸಲಾಗುತ್ತಿದೆ.

ಶ್ರೀಮಠಕ್ಕೆ ಸಂಬಂಧಿಸಿದ ಚೆನ್ನೈಯ ವಿದ್ಯಾತೀರ್ಥ ಫೌಂಡೇಶನ್ ಶೃಂಗೇರಿ ಜಗದ್ಗುರುಗಳಿಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಿದೆ. 2017ರ ಅಕ್ಟೋಬರ್ 11ರಿಂದ ಒಂದು ವಾರ ಕಾಲ ಶೃಂಗೇರಿಯಲ್ಲಿ ಜಗದ್ಗುರು ಶ್ರೀ ಮದಭಿನವ ವಿದ್ಯಾತೀರ್ಥಮಹಾಸ್ವಾಮಿಗಳವರ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದೆ.

'ಗಾವೋವಿಶ್ವಸ್ಯ ಮಾತರಃ' ಎಂಬಂತೆ ಜಗನ್ಮಾತೆಯ ಸ್ಥಾನದಲ್ಲಿರುವ ಗೋವುಗಳ ಸಂರಕ್ಷಣೆಗೆ ಶ್ರೀಮಠವು ವಿಶೇಷ ಮುತುವರ್ಜಿ ವಹಿಸುತ್ತಿದೆ. ಜಗದ್ಗುರುಗಳ ನಿವಾಸ ಸ್ಥಾನವಾದ ಶೃಂಗೇರಿಯ ನರಸಿಂಹವನದಲ್ಲಿ ವಿಶಾಲವಾದ ಗೋಶಾಲೆ ಇದೆ. ಅಲ್ಲಿಗೆ ಸಮೀಪದ ನರಸಿಂಹಪುರ ಅಗ್ರಹಾರ ಮತ್ತು ಬೆಂಗಳೂರು, ಕಾಲಟಿ, ಮಾಯಾವರಂ, ಪೂನಾ, ಗಂಟೂರು, ನಾಸಿಕಾದಲ್ಲಿರುವ ಶಂಕರಮಠಗಳಲ್ಲಿ ಮಾತ್ರವಲ್ಲ. ಅಮೇರಿಕಾ ಮತ್ತು ಕೆನಡಾದಲ್ಲಿರುವ ಶಂಕರಮಠಗಳಲ್ಲೂ ಗೋಶಾಲೆಗಳಿವೆ. ಗೋಸಂರಕ್ಷಣಾಕೇಂದ್ರಗಳನ್ನು ಶ್ರೀಮಠವು ಪ್ರೋತ್ಸಾಹಿಸುತ್ತಿದೆ. ಶೃಂಗೇರಿಯ ನರಸಿಂಹವನದಲ್ಲಿ ಗಜಶಾಲೆ, ಅಶ್ವಶಾಲೆ ಮತ್ತು ಜಿಂಕೆಗಳ ಉದ್ಯಾನವೂ (ಡೀರ್ ಪಾರ್ಕ್) ಇದೆ.

(ಮುಂದುವರಿಯುವುದು...)

## ನೂತನ ವಿಳಾಸ

**A. RAGHAVENDRA RAO**
F-502, 5TH FLOOR, BROOKLYN, CONCORDE MANHATTANS
OPP. WIPRO GATE NO 16, ELECTRONIC CITY PHASE-1 BANGALORE-560100.

★★★★ ★★★★

**KRISHNAPRASAD RAO**
FLAT NO.103, MADHUBHAN APARTMENT, J.B.LOBO ROAD,
KOTTARACHOWKI, MANGALORE-575006. PH : 9560136833

## ಕವನ — ವರ್ಷದ ವ್ಯಕ್ತಿ

- ಮಲ್ಲಿಕ್ ಉಳಿಯಾರು.

ರಾಜಕಾರಣಿಗಳ ತಂತ್ರ ಕುತಂತ್ರಗಳ
ದೊಂಬರಾಟಗಳನ್ನು ಕಂಡು ರೇಜಿಗೊಳಗಾದವ

ಹಲವು ಹತ್ತು ಪ್ರಾಕೃತಿಕ ದುರಂತಗಳನ್ನು
ಪ್ರತ್ಯಕ್ಷವಾಗಿ ಅನುಭವಿಸಿದವ

ಬೆಲೆ ಏರಿಕೆ ಕೋಮುಗಲಭೆ, ಕೃಷ್ಯುತ್ಪನ್ನಗಳ
ಏರುಪೇರುಗಳನ್ನು ಸಹಿಸಿಕೊಂಡವ

ವಿವಿಧ ಕೌಟುಂಬಿಕ, ಸಾಮಾಜಿಕ
ಏರಿಳಿತಗಳಿಗೆ ಸಾಕ್ಷಿಪ್ರಜ್ಞೆಯಾದವ

ಕಷ್ಟಪಟ್ಟು ದುಡಿದು, ಪ್ರಾಮಾಣಿಕವಾಗಿ
ತೆರಿಗೆ ಪಾವತಿಸಿದವ

ಮುಂದಿನ ಪೀಳಿಗೆಗಳಿಗಾಗಿ ತನ್ನೆಲ್ಲ ನೋವು
ಸಂಕಟಗಳನ್ನು ಮೌನವಾಗಿ ನುಂಗಿದವ

ಯಾರವ....? ಇಷ್ಟೆಲ್ಲ ತ್ಯಾಗ ಮಾಡಿದ
ಸೂಪರ್ ಸ್ಟಾರ್......... ವರ್ಷದ ವ್ಯಕ್ತಿ....

ಇನ್ಯಾರು? ಅವನೇ.....
ಸಾಮಾನ್ಯರಲ್ಲಿ ಸಾಮಾನ್ಯ.....ಶ್ರೀಸಾಮಾನ್ಯ.....

## ಶುಭ ವಿವಾಹ

ವಕ್ವಾಡಿ ಶ್ರೀಮತಿ ಲಲಿತಮ್ಮ ಹಾಗೂ ಶ್ರೀ ಪುಟ್ಟರಾಜ ಹೆಬ್ಬಾರರ ಪುತ್ರ **ಪ್ರಸಾದ** ಹಾಗೂ ವರಂಗ ಶ್ರೀಮತಿ ಉಷಾ ಹಾಗೂ ಶ್ರೀ ಕೆ. ಮಂಜುನಾಥ ಇವರ ಪುತ್ರಿ **ಮಧೂಷಾ**ರವರ ವಿವಾಹವು ತಾ. 21.02.2018ರಂದು ಹೆಬ್ರಿ ಶ್ರೀ ಅನಂತಪದ್ಮನಾಭ ಸನ್ನಿಧಿಯಲ್ಲಿ ನೆರವೇರಿತು.

★★★★ ★★★★

ಎರ್ಮಾಳು ಶ್ರೀ ವೈ.ಪ್ರಕಾಶ ರಾವ್ ಹಾಗೂ ಶ್ರೀಮತಿ ಲಲಿತಾರವರ ಪುತ್ರ **ಪ್ರಸನ್ನ** ಹಾಗೂ ಚಾರ್ಮಾಡಿ ಶ್ರೀಮತಿ ಶಾಲಿನಿ ಹಾಗೂ ಶ್ರೀ ಹರೀಶ್ ರಾವ್‌ರವರ ಪುತ್ರಿ **ಅಶ್ವಿತಾ**ರವರ ವಿವಾಹವು ತಾ. 01–04–2018ರಂದು ಚಾರ್ಮಾಡಿ ಶ್ರೀ ಮತ್ತೂರು ಪಂಚಲಿಂಗೇಶ್ವರ ದೇವಸ್ಥಾನದ ಪಂಚಶ್ರೀ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★ ★★★★

ಎಲ್ಲೂರು ಶ್ರೀಮತಿ ಶ್ರೀಲತಾ ಮತ್ತು ಶ್ರೀ ಸತೀಶರಾವ್‌ರವರ ಪುತ್ರ **ಶೈಲೇಶ್** ಹಾಗೂ ಮುಂಬಯಿ ಶ್ರೀಮತಿ ವೀಣಾ ಮತ್ತು ಶ್ರೀಮತಿ ವಿನಯ ತವಿಲ್ದಾರ್‌ರವರ ಪುತ್ರಿ **ಚೈತಾಲಿ**ರವರ ವಿವಾಹವು ತಾ. 09.04.2018ರಂದು ಪುಣೆಯ ಶೌರ್ಯ ಶ್ರೀ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಶ್ರೀಶಾರದಾ ತುರ್ತು ಸೇವಾ ಸಮಿತಿ

**ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.**

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | – | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | – | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | – | 9343572490 |
| 4. | ನಂದಳಿಕೆ ಉಮೇಶ್ ರಾವ್ | – | 8970504176 |
| 5. | ಹೆರ್ಗ ನಿರಂಜನ ರಾವ್ | – | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | – | 9448252736 |
| 7. | ಟಿ.ಜಗದೀಶ ರಾವ್ | – | 9686123905 |
| 8. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | – | 9945379479 |
| 9. | ಅಜಿತ್ ರಾವ್ ಬೈಲೂರು | – | 9448108920 |
| 10. | ಅದ್ಯಪಾಡಿ ಮೋಹನದೇವ್ | – | 0820–2535328 |
| 11. | ಡಾ। ವೈ. ಸುದರ್ಶನ್ ರಾವ್ | – | 9845136322 |
| 12. | ವೈ. ಪ್ರಕಾಶ್ ಕುಮಾರ್ | – | 9448445617 |
| 13. | ವೈ. ಪ್ರಸಾದ್ ಕುಮಾರ್ | – | 9036252105 |
| 14. | ಬಿ. ಜಯರಾಮ ರಾವ್ | – | 9844545040 |
| 15. | ಎಮ್.ಪಾಲಚಂದ್ರ ರಾವ್ | – | 0820–2521366 |
| 16. | ಕೆ. ವೆಂಕಟ್ ರಾವ್ | – | 9480016125 |
| 17. | ಎಸ್.ಎಮ್.ರಾವ್ | – | 9449914040 |
| 18. | ಐ.ಕೆ.ಜಯಚಂದ್ರ ರಾವ್ | – | 9448331683 |

## ಉಪನಯನ

**ಚಿ। ಅನಂತ**

ಕರಂದಾಡಿ ಶ್ರೀ ಪದ್ಮನಾಭ ಶ್ಯಾನುಭಾಗ್ ಹಾಗೂ ಶ್ರೀಮತಿ ಕಲಾವತಿ ದಂಪತಿಗಳು ತಮ್ಮ ಪುತ್ರ **ಅನಂತ**ನ ಬ್ರಹ್ಮೋಪದೇಶವನ್ನು ತಾ. 02.04.2018ರಂದು ತಮ್ಮ ಸ್ವಗೃಹ ಶ್ರೀ ಅನ್ನಪೂರ್ಣದಲ್ಲಿ ನೆರವೇರಿಸಿದರು.

## ವಾರ್ಷಿಕ ರಥೋತ್ಸವ


ರಾಮಕುಂಜ, ಪುತ್ತೂರು ತಾಲೂಕಿನ ಬಡೆಂಜದಲ್ಲಿರುವ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವವು ತಾ. 27.02.2018ರಂದು ಬ್ರಹ್ಮಶ್ರೀ ವಾಗೀಶಶಾಸ್ತ್ರಿಗಳ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು.


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರೀಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams




**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

*With Best Complimemts From*
SRI M. SHAILESH RAO
B.E., Civil
Ph : 9448624324
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಇದಕ್ಕೆ ದೇಣಿಗೆ



ಬೆಂಗಳೂರಿನ ಶ್ರೀ ಶಿವಪ್ರಕಾಶ್ ಶರ್ಮ ಅವರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಚಟುವಟಿಕೆಗಳನ್ನು ಮೆಚ್ಚಿ ಪ್ರೋತ್ಸಾಹ ರೂಪದಲ್ಲಿ ಹತ್ತು ಸಾವಿರ ರೂಪಾಯಿಯನ್ನು ದೇಣಿಗೆಯಾಗಿ ಇತ್ತಿದ್ದಾರೆ. ಇವರು ಬೆಂಗಳೂರಿನ ಪ್ರಖ್ಯಾತ ಸಾಹಿತಿ ಶ್ರೀ ಎ.ಪಿ. ಯಶವಂತ ಶರ್ಮ ಮತ್ತು ಅಹಲ್ಯ ಶರ್ಮ ಅವರ ಪುತ್ರರಾಗಿದ್ದು ಪ್ರ ಸಕ್ತ ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಲಿಮಿಟೆಡ್ ಕಂಪೆನಿಯಲ್ಲಿ ಪ್ರಾಜೆಕ್ಟ್ ವಿಭಾಗದಲ್ಲಿ ಜನರಲ್ ಮೇನೇಜರ್ ಹುದ್ದೆಯಲ್ಲಿದ್ದಾರೆ. ಇವರು ತಮ್ಮ ವಿದ್ಯಾಭ್ಯಾಸವನ್ನು ದಾವಣಗೆರೆಯಲ್ಲಿ ಪೂರೈಸಿದ್ದು ತಮ್ಮ ಕೆಲಸ ನಿಮಿತ್ತ ದೇಶದ ನಾನಾ ಭಾಗಗಳಲ್ಲಿ ಸೇವೆಯನ್ನು ಸಲ್ಲಿಸಿ ಪ್ರಸಕ್ತ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಗಾಯತ್ರಿ ಶರ್ಮ ಅವರು ಅದ್ಯಪಾಡಿ ಶ್ರೀ ಪ್ರಭಾಕರ ಸ್ವಾಮಿ ಹಾಗೂ ಶ್ರೀಮತಿ ಪ್ರೇಮಲತಾ ಅವರ ಪುತ್ರಿಯಾಗಿದ್ದು ಇವರಿಗೆ ಇಬ್ಬರು ಗಂಡು ಮಕ್ಕಳಿದ್ದು, ಮೊದಲನೆಯ ಮಗ ಆದಿತ್ಯ ಶರ್ಮ ಬೆಂಗಳೂರಿನ ಆರ್‌ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಮ್.ಟೆಕ್ ವ್ಯಾಸಂಗ ಮಾಡುತ್ತಿದ್ದು, ಎರಡನೆಯ ಮಗ ಅರ್ಜುನ ಶರ್ಮ ಎಮ್.ಎಸ್.ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೊನೆಯ ವರ್ಷದ ವಿದ್ಯಾರ್ಥಿಯಾಗಿರುತ್ತಾರೆ. ಶ್ರೀ ಶಿವಪ್ರಕಾಶ್ ಶರ್ಮರವರ ಕುಟುಂಬಕ್ಕೆ ಆಡಳಿತ ಮಂಡಳಿಯು ಧನ್ಯವಾದಗಳನ್ನು ಸಲ್ಲಿಸುತ್ತಾ ಶ್ರೀಶಾರದೆಯ ಅಭಯ ಹಾಗೂ ಅನುಗ್ರಹ ಸದಾ ಇರಲಿ ಎಂದು ಪ್ರಾರ್ಥಿಸುತ್ತದೆ.

## ಶಾರದೆಗೆ ಬೆಳ್ಳಿಯ ಹಾರದ ಕಾಣಿಕೆ



ನಮ್ಮ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೊಕ್ರಾಡಿ ಸುರೇಶರಾಯರು ಹಾಗೂ ಅವರ ಪತ್ನಿ ಶ್ರೀಮತಿ ನಾಗವಲ್ಲಿಯವರು ಶ್ರೀಶಾರದೆಯ ಪ್ರತಿಷ್ಠಾಮಹೋತ್ಸವದ ದಿವಸ ಬೆಳ್ಳಿಯ ಸುಂದರವಾದ ಹಾರವನ್ನು ಕಾಣಿಕೆಯಾಗಿ ದೇವಿಗೆ ಸಮರ್ಪಿಸಿದರು. ಶ್ರೀ ಕೊಕ್ರಾಡಿ ಸುರೇಶರಾಯರು ಕೊಕ್ರಾಡಿ ಶ್ಯಾಮರಾವ್ ಹಾಗೂ ರಾಜಮ್ಮ ದಂಪತಿಗಳ ಪುತ್ರ. ಎಂ.ಎ ಪದವೀಧರರು. ಬಾರ್ಡರ್ ಸೆಕ್ಯೂರಿಟಿ ಫೋರ್ಸ್‌ನಲ್ಲಿ 23 ವರ್ಷ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಸದ್ಯ ಉಡುಪಿಯ ದೀಪಾ ಎಂಟರ್‌ಪ್ರೈಸಸ್ ಎಂಬ ಖಾಸಗಿ ಸಂಸ್ಥೆಯ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಪತ್ನಿ ಶ್ರೀಮತಿ ನಾಗವಲ್ಲಿಯವರು ಶ್ರೀ ವೈ.ಗೋಪಾಲರಾವ್ ಹಾಗೂ ಶ್ರೀಮತಿ ಸುಮತಿ ರಾವ್ ದಂಪತಿಗಳ ಪುತ್ರಿ. ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಈರ್ವರು ಪುತ್ರರು ವಿವಾಹವಾಗಿ ಉದ್ಯೋಗದಲ್ಲಿದ್ದಾರೆ. ಶ್ರೀ ಸುರೇಶರಾವ್ ದಂಪತಿಗಳ ಕುಟುಂಬಕ್ಕೆ ಶ್ರೀ ಶಾರದೆಯ ಅಭಯ ಹಾಗೂ ಅನುಗ್ರಹ ಸದಾ ಇರಲಿ ಎಂದು ಆಡಳಿತ ಮಂಡಳಿ ಪ್ರಾರ್ಥಿಸುತ್ತದೆ.

## ಕುಂದಾಪುರ ಸಂಘದ ವಾರ್ಷಿಕೋತ್ಸವ



ದಿನಾಂಕ 28-01-2018ನೇ ಭಾನುವಾರ ಗುಡೇ ಮಹಾಲಿಂಗೇಶ್ವರ ದೇವಾಲಯದ ಹೆರೇಂಜಾಲಿನ ದಿ। ಶ್ರೀಮತಿ ರತ್ನಮ್ಮ ಲಕ್ಷ್ಮೀನಾರಾಯಣ ಮೇರ್ಟ ವೇದಿಕೆಯಲ್ಲಿ ಕುಂದಾಪುರ ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವವು ನೆರವೇರಿತು.

ಬೆಳಗಿನ ಉಪಾಹಾರದ ನಂತರ ನಡೆದ ಉದ್ಘಾಟನಾ ಕಾರ್ಯಕ್ರಮವು ಜಂಬೆ ಕೃಷ್ಣ ಗೋಪಾಲ್ ಹೆಬ್ಬಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇದಿಕೆಯಲ್ಲಿ ಶ್ರೀಮತಿ ಪುಷ್ಪಲತಾ ಉಮೇಶ್ ಶಾನುಭೋಗ್, ಪದ್ಮನಾಭ ಮೇರ್ಟ ಉಪಸ್ಥಿತರಿದ್ದರು. ಪ್ರಭಾಕರ್ ಮೇರ್ಟ ಸ್ವಾಗತಿಸಿದರು ಹಾಗೂ ನಾಗರಾಜ ಮೇರ್ಟ ಧನ್ಯವಾದವಿತ್ತರು. ನಂತರ ಮಧ್ಯಾಹ್ನ ವಾರ್ಷಿಕ ಅಧಿವೇಶನದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷರಾದ ಜಂಬೆ ಕೃಷ್ಣ ಗೋಪಾಲ್ ಹೆಬ್ಬಾರ್ ವಹಿಸಿದ್ದರು. ಉಡುಪಿ ಜಿಲ್ಲಾ ಪಂಚಾಯತ್ ಸಿ.ಪಿ.ಒ. ಶ್ರೀ ಶ್ರೀನಿವಾಸ ರಾವ್‌ರವರು ಮುಖ್ಯ ಅತಿಥಿಯಾಗಿ ಆಗಮಿಸಿ ಸಮಾಜ ಜೀವನದಲ್ಲಿ ಬದಲಾವಣೆ ಅಗತ್ಯ ಪ್ರಯತ್ನದಿಂದ ಅವಕಾಶ ಮಾಡಿಕೊಂಡು ಸಮಾಜವನ್ನು ನಡೆಸಿಕೊಂಡು ಸಮಾಜ ಸೇವೆ ಮಾಡಬೇಕೆಂದು ತಿಳಿಸಿದರು.

ಸಭೆಯಲ್ಲಿ ಶ್ರೀ ಉಮೇಶ್ ಶ್ಯಾನುಭಾಗ್ ಮಾಜಿ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಹೆಬ್ಬಾರ್, ಖಜಾಂಚಿ ಸತ್ಯನಾರಾಯಣ ಹೆಬ್ಬಾರ್ ಕಾರ್ಯದರ್ಶಿ ಜಗದೀಶ ಹೆಚ್ ಮತ್ತು ವಾಸುದೇವ ಹೆಬ್ಬಾರ್ ರಟ್ಟಾಡಿ ಉಪಸ್ಥಿತರಿದ್ದರು.

ಸಮಾಜದ ಸಾಧಕರಾದ ಶ್ರೀ ಜೆ. ಶ್ರೀಕಂಠ ಹೆಬ್ಬಾರ್, ಹೆಚ್ ವೆಂಕಟೇಶ ರಾವ್, ಕೆ. ಶಂಕರ ರಾವ್, ಮತ್ತು ದಯಾನಂದ ಅವರನ್ನು ಸನ್ಮಾನಿಸಲಾಯಿತು. ಪ್ರತಿಭಾ ಪುರಸ್ಕಾರದಲ್ಲಿ ರೋಹನ್ ಹೆಚ್, ನಂದಿನಿ ರಾಜಶೇಖರ ಹೆಬ್ಬಾರ್‌ರವರನ್ನು ಗುರುತಿಸಲಾಯಿತು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಮಾಜ ಬಾಂಧವರಿಗೆ ಅಟೋಟ ಸ್ಪರ್ಧೆ ನಡೆಸಿ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮವನ್ನು ವಿನಾಯಕ ಮೇರ್ಟ ಮತ್ತು ಲಕ್ಷ್ಮೀನಾರಾಯಣ ರಾವ್ ನಿರೂಪಿಸಿದರು. ರಶ್ಮಿಯವರು ಧನ್ಯವಾದವನ್ನು ಸಲ್ಲಿಸಿದರು. ಸಭೆಯು ಸಂಪೂರ್ಣ ಪ್ರಾಯೋಜಕತ್ವವನ್ನು ದಾನಿಗಳಾದ ಶ್ರೀ ಪದ್ಮನಾಭ ಮೇರ್ಟ ಮತ್ತು ಸಹೋದರರಿಂದ ಅದ್ದೂರಿಯಾಗಿ ಜರುಗಿತು.

## ಬಿ.ಸಿ.ಎ ಯಲ್ಲಿ ರ್‍ಯಾಂಕ್ ವಿಜೇತೆ ಕು। ಶ್ರೀರಕ್ಷಾ ರಾವ್, ಅಲೆವೂರು



2017-18ರ ಸಾಲಿನ ಅಂತಿಮ ಪರೀಕ್ಷೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಬಿ.ಸಿ.ಎ ಪದವಿ ವಿಭಾಗದಲ್ಲಿ 8ನೇ ರ್‍ಯಾಂಕ್ ವಿಜೇತೆಯಾದ ಕು। ಶ್ರೀರಕ್ಷಾ ರಾವ್, ಮೂಡು ಅಲೆವೂರು ಇವರು ಅಲೆವೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಕಾಂತ ರಾವ್ ಚೊಕ್ಕಾಡಿ ಹಾಗೂ ಶ್ರೀಮತಿ ಶ್ರೀದೇವಿ ಇವರ ಸುಪುತ್ರಿ. ಕು। ಶ್ರೀರಕ್ಷಾಳ ಪ್ರತಿಭೆಗೆ ಶ್ರೀ ಶಾರದಾ ಅಭಿನಂದನೆಗಳು


**With Best Compliments From :**

*****Rajathadri Hotel Pvt. Ltd.**
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಪಾವಂಜೆ : ವೈ. ಮೋಹನ ರಾವ್‌ರವರ ಕೃತಿ – 'ಅತ್ತ ಇತ್ತ ಸುತ್ತಮುತ್ತ' ಲೋಕಾರ್ಪಣೆ





ನಿವೃತ್ತ ಉಪನ್ಯಾಸಕ ವೈ.ಮೋಹನ ರಾವ್‌ರವರ ಆರನೆಯ ಕೃತಿ 'ಅತ್ತ ಇತ್ತ ಸುತ್ತಮುತ್ತ' ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇಗುಲದ ಶಾರಧ್ವತ ಸಭಾಂಗಣದಲ್ಲಿ ನಡೆದ ಸಮಾರಂಭ ವೊಂದರಲ್ಲಿ 25–03–2018ರಂದು ಇತ್ತೀಚೆಗೆ ಬಿಡುಗಡೆಗೊಂಡಿತು.

ದೇವಸ್ಥಾನದ ಆಡಳಿತ ಮೊಕ್ತೇಸರ ರಾಗಿರುವ ಶ್ರೀ ಎಂ.ಶಶೀಂದ್ರ ಕುಮಾರ್‌ರವರು ಪುಸ್ತಕವನ್ನು ಲೋಕಾರ್ಪಣೆ ಮಾಡಿದರು. ಆ ಸಂದರ್ಭದಲ್ಲಿ ಮಾತನಾಡಿದ ಅವರು "ಮೊಬೈಲ್ ಮತ್ತು ಕಂಪ್ಯೂಟರ್ ಯುಗದಲ್ಲಿ ನಾವು ಓದುವ ಹಾಗೂ ಬರೆಯುವ ಹವ್ಯಾಸದಿಂದ ದೂರ ಸರಿಯುತ್ತಿದ್ದೇವೆ. ಆದರೆ ನಮಗೆ ಲಭ್ಯವಿರುವ ಸಾಕಷ್ಟು ಸಂಖ್ಯೆಯ ಉತ್ತಮ ಪುಸ್ತಕಗಳನ್ನು ಓದುವುದರ ಮೂಲಕ ಸುಸಂಸ್ಕೃತ ಬದುಕಿನ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ರೂಢಿಸಿಕೊಳ್ಳಲು ಸಾಧ್ಯವಾಗು ವುದರ ಜೊತೆಗೆ ಬರಹಗಾರರನ್ನು ಪ್ರೋತ್ಸಾಹಿಸಿ ದಂತಾಗುತ್ತದೆ" ಎಂಬುದಾಗಿ ಹೇಳಿದರು.

ಗ್ರಂಥದ ಬಗ್ಗೆ ವಿಶ್ಲೇಷಣೆ ಮಾಡಿ ಮಾತನಾಡಿದ ಪೂರ್ಣಪ್ರಜ್ಞಾ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾಗಿರುವ ಶ್ರೀ ಅಶ್ವತ್ಥ್ ಭಾರದ್ವಾಜ್ ಕಬ್ಬಿನಾಲೆಯವರು "ನಮ್ಮ ಸುತ್ತಮುತ್ತಲು ಇರುವ ಅತ್ಯಂತ ಸೂಕ್ಷ್ಮ ಸಂಗತಿಗಳನ್ನು ತುಂಬ ಪರಿಣಾಮಕಾರಿಯಾಗಿ ಅಕ್ಷರರೂಪದಲ್ಲಿ ದಾಖಲಿಸುವುದಕ್ಕೆ ವಿಶೇಷವಾದ ಕಸುಬುದಾರಿಕೆಯ ಅಗತ್ಯವಿದೆ. ಬರವಣಿಗೆಯಲ್ಲಿ ವೈವಿಧ್ಯವನ್ನು ತಂದಾಗ ಅಂತಹ ಪ್ರಯತ್ನ ಶ್ಲಾಘನೀಯವೆನಿಸುತ್ತದೆ. ಮೌಲ್ಯಯುತವಾದುದನ್ನು ಜನಮಾನಸಕ್ಕೆ ಬರವಣಿಗೆಯ ಮೂಲಕ ತಲುಪಿಸುವ ಗ್ರಂಥಕರ್ತರ ಕಾಳಜಿಗೆ ತಲೆಬಾಗಲೇಬೇಕು" ಎಂಬುದಾಗಿ ಅಭಿಪ್ರಾಯಪಟ್ಟರು.

ದೇವಳದ ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ನಕ್ರೆ ಬಾಲಕೃಷ್ಣ ರಾವ್ ಗ್ರಂಥಕರ್ತರ ಬರವಣಿಗೆಯ ಕಾಯಕಕ್ಕೆ ಸಂತಸ ವ್ಯಕ್ತಪಡಿಸಿ ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ ದೇಗುಲದ ಧರ್ಮದರ್ಶಿಗಳಾದ ಡಾ. ಯಾಜಿ ನಿರಂಜನ ಭಟ್‌ರವರು "ಸಾಹಿತ್ಯದ ಓದು ಬದುಕಿನಲ್ಲೊಂದು ಅನನ್ಯ ಪುಳಕಕ್ಕೆ ಕಾರಣವಾಗುತ್ತ ಬರವಣಿಗೆಯ ಹವ್ಯಾಸದೊಂದಿಗೆ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದಕ್ಕೆ ಈ ಸಮಾರಂಭ ನಾಂದಿಯಾಗಲಿ" ಎಂಬ ಮಾತುಗಳ ಮೂಲಕ ಗ್ರಂಥಕರ್ತರಿಗೆ ಶುಭಕೋರಿದರು.

ಕೃತಿಕಾರ ವೈ. ಮೋಹನ ರಾವ್‌ರವರನ್ನು ದೇವಸ್ಥಾನದ ವತಿಯಿಂದ ಶಾಲು ಹೊದಿಸಿ ಅಭಿನಂದಿಸಲಾಯಿತು.

ಶ್ರೀಮತಿ ಪದ್ಮಿನಿ ಆರ್. ರಾವ್ ಮತ್ತು ಶ್ರೀಮತಿ ಸಾವಿತ್ರಿ ದಿವಾಕರ್ ಪ್ರಾರ್ಥಿಸಿದರು.

ಗ್ರಂಥಕರ್ತ ವೈ.ಮೋಹನ ರಾವ್ ಸ್ವಾಗತಿಸಿದರು. ವೈ. ಧೀರಜ್ ರಾವ್ ವಂದಿಸಿದರು. ಶಂಕರನಾರಾಯಣದ ಮದರ್ ತೆರೆಸಾ ಪ.ಪೂ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿರುವ ರಾಮಭಟ್ಟ ಸಜಂಗದ್ದೆಯವರು ಕಾರ್ಯಕ್ರಮವನ್ನು ನಿರ್ವಹಿಸಿದರು.

## ಕುಡುಪು ಕ್ಷೇತ್ರ ಕಥಾನಕ



ಇತ್ತೀಚೆಗೆ ನಡೆದ ಕುಡುಪು ಅನಂತ ಪದ್ಮನಾಭ ದೇವಸ್ಥಾನದ ಬ್ರಹ್ಮಕಲೋಶೋತ್ಸವ ಕಾರ್ಯಕ್ರಮದಲ್ಲಿ ತಾರೀಕು 20–02–2018 ರಂದು ಶ್ರೀ ಸುಬ್ರಹ್ಮಣ್ಯ ಸಭಾದ ಕಲಾವಿದರು ಶ್ರೀ ರಾಂ ಎಲ್ಲಂಗಳ ವಿರಚಿತ "ಶ್ರೀ ಕುಡುಪು ಕ್ಷೇತ್ರ ಕಥಾನಕ" ಎಂಬ ಗೀತ ರೂಪಕವನ್ನು ಪ್ರಸ್ತುತ ಪಡಿಸಿದರು. ದೇವಸ್ಥಾನದ ಸಮಿತಿಯ ವತಿಯಿಂದ ಶ್ರೀ ಸಂಜಯ ಕುಮಾರ್ ಪಿ. ಇವರನ್ನು ಕಲಾವಿದರ ಪರವಾಗಿ ಸ್ಮರಣಿಕೆ ನೀಡಿ ಶಾಲು ಹೊದಿಸಿ ಸನ್ಮಾನಿಸಿದರು.

## ರಕ್ತದಾನ ಶಿಬಿರ



ಮಾರ್ಚ್ 10ರಂದು ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನ ಸಹಕಾರದೊಂದಿಗೆ ಮಣಿಪಾಲ ಕೆಎಮ್‌ಸಿ ಆಸ್ಪತ್ರೆಯ ಸಹಯೋಗದಲ್ಲಿ ಫ್ರೆಂಡ್ಸ್ ಗ್ರೂಪ್, ಉಡುಪಿ ಆಯೋಜಿಸಿರುವ ರಕ್ತದಾನ ಶಿಬಿರದಲ್ಲಿ ಫ್ರೆಂಡ್ಸ್ ಗ್ರೂಪ್ ಉಡುಪಿಯ ಗೌರವಾಧ್ಯಕ್ಷರಾದ ಶ್ರೀ ವಸಂತ ರಾವ್ ಕರಂಬಳ್ಳಿಯವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಫ್ರೆಂಡ್ಸ್ ಗ್ರೂಪ್ ಉಡುಪಿಯವರು ಸುಮಾರು 8 ವರ್ಷಗಳಿಂದ ರಕ್ತದಾನ ಶಿಬಿರವನ್ನು ಆಯೋಜಿಸುತ್ತಾ ಬಂದಿದ್ದು ಆ ಮೂಲಕ ಜನಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಇದು ಇದೇ ರೀತಿ ಮುಂದುವರಿಯಲಿ ಎಂದು ನಮ್ಮ ಮಿತ್ರವೃಂದ ಉಡುಪಿಯವರ ಹಾರೈಕೆ.

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+

Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org